♦ ಮಂಡ್ಯ ♦ ಮೈಸೂರು ♦ ಚಾಮರಾಜನಗರ ♦ ಹಾಸನ ♦ ರಾಮನಗರ ♦ ತುಮಕೂರು ♦ ಬೆಂಗಳೂರು ಗ್ರಾಮಾಂತರ ♦ ಬೆಂಗಳೂರು ನಗರ

E-mail:kayakayogi @gmail.com

website: www.kayakayogi.com

ಕಾಯಕ ಯೋಗಿ

ಸಂಪಾದಕರು:ಅರುಣಜ್ಯೋತಿ ಬಿ.ಕೆ. KAYAKA YOGI - Regional Daily ಪ್ರಾದೇಶಿಕ ದಿನಪತ್ರಿಕೆ

RNI NO.KARKAN/2018/77805 | POST NO.KA/SK/MND/999/2022-2024 | ಮಂಡ್ಯ Mandya | ಸಂಪುಟ volume 07 | ಸಂಚಿಕೆ Issue 22 | ಶನಿವಾರ Saturday | 27-04-2024 | ಪುಟಗಳು Pages 06 | ಬೆಲೆ Rate 02 | ಸಂಪರ್ಕ 9980605484

Connecting hearts in the cultural capital
ASK ಮೈಸೂರು
#askmysuru

ಮಂಡ್ಯ ಜಿಲ್ಲೆಯಲ್ಲಿ ಮಾದರಿ ಮತದಾನ

* ಶಾಂತಿಯುತವಾಗಿ ಹಕ್ಕು ಚಲಾಯಿಸಿದ ಮತದಾರ ಪ್ರಭು
* ಬಿಸಿಲಿಗೆ ಡೋಂಟ್ ಕೇರ್
* ಆರಂಭದಲ್ಲಿ ಮಂದಗತಿ ಕೊನೆಯಲ್ಲಿ ರಣೋತ್ಸಾಹ
* ಜಿಲ್ಲೆಯಲ್ಲಿ ಶೇ.81ರಷ್ಟು ಮತದಾನ



■ ಕಾಯಕಯೋಗಿ ಸುದ್ದಿ

ಮಂಡ್ಯ: ರಾಜಕೀಯವನ್ನೇ ಹಾಸಿಹೊದ್ದು ಮಲಗಿರುವ ಸಕ್ಕರೆ ನಾಡು ಮಂಡ್ಯ ಜಿಲ್ಲೆಯಲ್ಲಿ ಈ ಬಾರಿ ಲೋಕಸಭೆ ಚುನಾವಣಾ ಕಣ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹಾಗೂ ಸಚಿವ ಎನ್.ಚಲುವರಾಯಸ್ವಾಮಿಯವರ ಜಿದ್ದಾಜಿದ್ದಿ ರಾಜಕಾರಣದಿಂದ ರಂಗೇರಿದ್ದು ಕಳೆದ ಬಾರಿಗಿಂತ ಶೇಖಡವಾರು ಹೆಚ್ಚು ಮತದಾನ ನಡೆದಿದೆ.

ಲೋಕಸಭೆಗೆ ಶುಕ್ರವಾರ ನಡೆದ ಮತದಾನ ಶಾಂತಿಯುತವಾಗಿ ನಡೆದಿದ್ದು, ಶೇ.81ಕ್ಕೂ ಅಧಿಕ ಮತದಾನ ನಡೆದಿದ್ದು, ಯಾವುದೇ ಅಹಿತಕರ ಘಟನೆಗಳು ಸಂಭವಿಸದೆ ಶಾಂತಿಯುತವಾಗಿ ನಡೆದಿದೆ.

ಬೆಳಿಗ್ಗೆ 7 ಗಂಟೆಗೆ ಪ್ರಾರಂಭವಾದ ಮತದಾನ ಪ್ರಕ್ರಿಯೆ ಮಂದಗತಿಯಲ್ಲೇ ಸಾಗಿ ಮಧ್ಯಾಹ್ನದ ನಂತರ ರಣೋತ್ಸಾಹ ಹೆಚ್ಚಾಗಿ ಶೇಖಡವಾರು ಮತದಾನ ಏರಿಕೆಯಾಯಿತು. ಜಿಲ್ಲೆಯಲ್ಲಿ ಯಾವುದೇ ಅಡ್ಡಿ ಆತಂಕಗಳಲ್ಲದೆ ನಿರಾಯಾಸವಾಗಿ ಮತದಾನ ನಡೆದಿದೆ. ಶ್ರೀರಂಗಪಟ್ಟಣ ಕ್ಷೇತ್ರದ ಬೆಳಗೊಳ, ಕೆ.ಆರ್.ಎಸ್.ನ ಮತಗಟ್ಟೆಗಳಲ್ಲಿ ಕೆಲ ನಿಮಿಷ ಇವಿಎಂ ಮತಯಂತ್ರಗಳಲ್ಲಿ ದೋಷ ಕಂಡು ಬಂದದ್ದನ್ನು ಹೊರತುಪಡಿಸಿ ಉಳಿದ ಭಾಗಗಳಲ್ಲಿ ಯಾವುದೇ ದೋಷಗಳು ಕಂಡುಬಂದಿಲ್ಲ.

ಬಿಸಿಲಿಗೆ ಡೋಂಟ್ ಕೇರ್ : ಮಂಡ್ಯ ನಗರ ಪ್ರದೇಶದಲ್ಲಿ ಬೆಳಿಗ್ಗೆಯಿಂದಲೇ ಮತದಾನ ಬಿರುಸು ಪಡೆದುಕೊಂಡಿತ್ತು. ಆದರೆ, ತಾಲ್ಲೂಕು, ಹೋಬಳಿ ಪ್ರದೇಶದಲ್ಲಿ ಆರಂಭದಲ್ಲಿ ಮತದಾನದಲ್ಲಿ ಚುರುಕು ಕಂಡುಬರಲಿಲ್ಲ. ಗ್ರಾಮಾಂತರ ಪ್ರದೇಶದಲ್ಲೂ ನಿಧಾನಗತಿಯಲ್ಲಿ ಮತದಾನ ಪ್ರಕ್ರಿಯೆ ಸಾಗಿತ್ತು.

ನಗರ ಪ್ರದೇಶದಲ್ಲಿ 9ರ ನಂತರ ವೇಗ ಪಡೆದುಕೊಂಡು 11 ಗಂಟೆಯವರೆಗೂ ನಡೆಯಿತು. ನಗರ ಪ್ರದೇಶಕ್ಕೆ ಹೋಲಿಸಿದರೆ, ಹೋಬಳಿ, ತಾಲ್ಲೂಕು ಕೇಂದ್ರಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಇತ್ತು. ಇವೆರಡಕ್ಕೂ ಹೋಲಿಸಿದರೆ ಗ್ರಾಮೀಣ ಭಾಗದಲ್ಲಿ ಸ್ವಲ್ಪ ಕಡಿಮೆ ಇತ್ತು.

ಬಿಸಿಲ ಝಳ ಹೆಚ್ಚಾಗಿದ್ದರೂ ಹೆಚ್ಚಿನ ಪ್ರಮಾಣದಲ್ಲಿ ಜನತೆ ಮತದಾನಕ್ಕೆ ಉತ್ಸಾಹ ತೋರಿದರೆ, ಇನ್ನೂ ಕೆಲವು ಕಡೆ ಕಡಿಮೆ ಸಂಖ್ಯೆಯಲ್ಲಿ ನೆರೆದಿದ್ದರು. ಹೊಸ ಮತದಾರರು ಪೋಷಕರೊಟ್ಟಿಗೆ ಆಗಮಿಸಿ ಮತದಾನ ಮಾಡುವ ಮೂಲಕ ಹೊಸ ಅನುಭವ ಪಡೆದುಕೊಂಡರು. ವೃದ್ಧರು, ಅಂಗವಿಕಲರು ತಮ್ಮ ಬಂಧು ಮತ್ತು ಸ್ನೇಹಿತರೊಂದಿಗೆ ಆಗಮಿಸಿ ಮತ ಚಲಾಯಿಸಿ ಉತ್ಸಾಹ ತೋರಿದರು. 85 ವರ್ಷ ಮೇಲ್ಪಟ್ಟ ಮತ್ತು ಶತಾಯುಷಿಗಳನ್ನು ಮನೆಯವರೇ ಕರೆತಂದು ಮತ ಹಾಕಿಸಿ, ಅವರ ಹಕ್ಕು ಕಳೆದುಕೊಳ್ಳದಂತೆ ಎಚ್ಚರವಹಿಸಿದರು.

ಜನತೆಯಲ್ಲಿ ಕಾಣದ ರಣೋತ್ಸಾಹ: ಕಳೆದ 25 ವರ್ಷಗಳಿಂದ ಸಿನಿಮಾ ಕಲಾವಿದರು ಮಂಡ್ಯ ಲೋಕಸಭಾ ಚುನಾವಣಾ ಅಖಾಡದಲ್ಲಿ ಇರುತ್ತಿದ್ದರು. ನಟ-ನಟಿಯರ ಮೇಲಿನ ಅಭಿಮಾನ ಮತದಾರರಲ್ಲಿ ತೀವ್ರ ಕುತೂಹಲ ಮತ್ತು ಆಸಕ್ತಿಯನ್ನು ಕೆರಳಿಸುವಂತೆ ಮಾಡಿತ್ತು. ಆದರೆ, ಈ ಚುನಾವಣೆಯಲ್ಲಿ ಸಿನಿಮಾ ಕಲಾವಿದರು ಸ್ಪರ್ಧಿಸದೇ ಇರುವುದರಿಂದ ಮತದಾರರಿಗೆ ಚುನಾವಣೆ ಬಗೆಗಿನ ಆಸಕ್ತಿ ಮತ್ತು ಕುತೂಹಲ ಕ್ಷೀಣಿಸಿತ್ತು. ಚುನಾವಣೆಯಲ್ಲಿ ಇಂತಹವರನ್ನೇ ಗೆಲ್ಲಿಸಬೇಕೆಂಬ ರಣೋತ್ಸಾಹ ಜನರಲ್ಲಿ ಕಂಡುಬರಲಿಲ್ಲ.

ಸುಡು ಬಿಸಿಲಿದ್ದರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮತದಾನ ಮಂದಗತಿಯಲ್ಲಿ ಸಾಗಿತ್ತು. ಸಂಜೆ 4ರ ನಂತರ ಸೂರ್ಯನ ಬಿಸಿಲು ಕಡಿಮೆಯಾಗುತ್ತಿದ್ದಂತೆ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಬಂದು ಮತ ಚಲಾಯಿಸುತ್ತಿದ್ದದ್ದು ಕಂಡುಬಂತು.

ಮತದಾನದ ವಿವರ:

ಬೆಳಿಗ್ಗೆ 11 ಗಂಟೆಗೆ 8 ಕ್ಷೇತ್ರಗಳಿಂದ ಶೇ. 21.44ರಷ್ಟು ಮತದಾನವಾಗಿತ್ತು. ಮಧ್ಯಾಹ್ನ 1 ಗಂಟೆಗೆ ಶೇ. 40.74, ಮಧ್ಯಾಹ್ನ 3 ಗಂಟೆಗೆ ಶೇ. 57.43, ಸಂಜೆ 5 ಗಂಟೆಗೆ 74.87ರಷ್ಟು ಮತದಾನ ನಡೆದು, ನಂತರ ಮತದಾನದಲ್ಲಿ ವೇಗ ಪಡೆದುಕೊಂಡಿತು.

ಪುಳಕಿತರಾದ ಮೊದಲ ಮತದಾರರು:

ಮೊದಲ ಬಾರಿಗೆ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಯುವಕ-ಯುವತಿಯರು ಪುಳಕಿತರಾದರಲ್ಲದೆ, ಹಕ್ಕು ಚಲಾಯಿಸಿ ಸಂತಸಪಟ್ಟರು. ಮತಕೇಂದ್ರದೊಳಗೆ ಮೊಬೈಲ್ ನಿಷೇಧವಿದ್ದ ಕಾರಣ ಮತದಾನ ಮಾಡಿದ ನಂತರ ಮತಗಟ್ಟೆ ಮುಂದೆ ನಿಂತು ಕೆಲವರು ಫೋಟೋ ಕ್ಲಿಕ್ಕಿಸಿಕೊಂಡರೆ, ಮತ್ತೆ ಕೆಲವರು ಹೊರಬಂದು ಸೆಲ್ಫಿ ತೆಗೆದುಕೊಂಡು ಹೋಗುತ್ತಿದ್ದುದು ಕಂಡುಬಂತು.

6ನೇ ಪುಟಕ್ಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಯತೀಂದ್ರ ಸಿದ್ದರಾಮಯ್ಯ ಅವರು ಸಿದ್ದರಾಮನಹುಂಡಿ ಮತಗಟ್ಟೆಯಲ್ಲಿ ಮತದಾನ ಮಾಡಿದರು.

ಮತಗಟ್ಟೆಗೆ ಕಹಳೆ ಹಿಡಿದು ಬಂದ ಕಲಾವಿದ



ಚಾಮರಾಜನಗರದ ಡಾ.ಬಿ.ಆರ್ ಅಂಬೇಡ್ಕರ್ ಬಡಾವಣೆಯಲ್ಲಿರುವ 14 ನೇ ವಾರ್ಡ್‌ನ ಮತಗಟ್ಟೆಗೆ ಜಾನಪದ ಧಿರಿಸು ಧರಿಸಿ, ಕಹಳೆ ಹಿಡಿದು ಬಂದು ಕಲಾವಿದ ರವಿಚಂದ್ರಪ್ರಸಾದ್ ಮತದಾನ ಮಾಡಿದರು. ಚಾಮರಾಜನಗರ ಜಾನಪದ ನಾಡು ಎಂಥಲೇ ಹೆಸರುವಾಸಿಯಾಗಿದ್ದು ಆ ಹಿನ್ನೆಲೆ ಪ್ರಜಾಪ್ರಭುತ್ವದ ಹಬ್ಬವನ್ನು ಜಾನಪದ ಕಲಾವಿದನಾಗಿ ಮತದಾನದಲ್ಲಿ ಪಾಲ್ಗೊಂಡಿದ್ದೇನೆ ಎಂದು ತಿಳಿಸಿದರು.



ಸಿದ್ದಗಂಗಾ ಮಠ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳವರು ಮೊದಲು ಮತಹಕ್ಕು ಚಲಾಯಿಸಿದರು. ಮತದಾನಕ್ಕೂ ಮುನ್ನ ಮತದಲ್ಲಿ ಗೋವುಗಳಿಗೆ ಪೂಜ್ಯರು ಹಣ್ಣು ತಿನ್ನಿಸಿ ಮತಗಟ್ಟೆಗೆ ಆಗಮಿಸಿದರು.

ಮತದಾನದ ಬಳಿಕ ಮಾತನಾಡಿದ ಪೂಜ್ಯರು ಕಡ್ಡಾಯ ಮತದಾನ ಕಾನೂನು ಜಾರಿಗೆ ತರದೇ ಇರೋದು ಈ ದೇಶದ ದುರಂತ. ಪ್ರತಿಶತ 100 ಮತದಾನ ಆಗಬೇಕಾದರೆ ಕಡ್ಡಾಯ ಮತದಾನ ಕಾನೂನು ತರಬೇಕು ಎಂದು ಆಗ್ರಹಿಸಿದರು. ಹಾಗಾದರೆ ಮಾತ್ರ ಶೇಕಡಾ 100ರಷ್ಟು ಮತದಾನ ಪ್ರಮಾಣವಾಗಲಿದೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತದಾನದ ಜಾಗೃತಿಯಾಗಿದೆ. ಆದರೆ, ಹೆಚ್ಚಿನ ವಿದ್ಯಾವಂತರಾದ ನಗರ ಪ್ರದೇಶದಲ್ಲಿ ಇದುವಂತವರು ಮತದಾನ ಮಾಡಲು ನಿರಾಸಕ್ತಿ ತೋರುತ್ತಿದ್ದಾರೆ. ಇದು ಆಗಬಾರದು ಎಂದು ಹೇಳಿದರು.

ಕುದರೆ ಏರಿ ಬಂದ ಮತದಾನ ದೊರೆ..



ತಿಪಟೂರು: ಶುಕ್ರವಾರ ಲೋಕಸಭಾ ಚುನಾವಣೆ ಮತದಾನ ಪ್ರಕ್ರಿಯೆ ಯಶಸ್ವಿಯಾಗಿ ನಡೆಯಿತು. ಇದೇ ಪ್ರಥಮ ಬಾರಿಗೆ ವಿಶೇಷ ರೀತಿಯಲ್ಲಿ ಮತಘಟ್ಟೆಗೆ ಬಂದು ಮತದಾನ ಮಾಡಿದ ಕಲ್ಪತರು ರತ್ನ ಡಾ. ಜಿ.ಎಸ್.ಶ್ರೀಧರ್ ರಾಜ್ಯದ ಗಮನ ಸೆಳೆದಿದ್ದಾರೆ.

ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ಕದುರೆ ಮೇಲೆ ಕುಳಿತು ನಾನಾ ಮತಘಟ್ಟೆಗಳಿಗೆ ಬೇಟಿ ನೀಡಿ ಮತದಾನದ ಪ್ರಾಮುಖ್ಯತೆ ಬಗ್ಗೆ ಹೊಸ ತರಹದಲ್ಲಿ ಜಾಗೃತಿ ಮೂಡಿಸಿದ ಶ್ರೀಧರ್ ನಂತರ ಮತಘಟ್ಟೆ ಸಂಖ್ಯೆ: 82 ರಲ್ಲಿ ಮತದಾನ ಮಾಡುವ ಮೂಲಕ ತಮ್ಮ ಹಕ್ಕು ಚಲಾಯಿಯಿಸಿದರು. ಸದೃಢ ಭಾರತ ನಿರ್ಮಾಣದಲ್ಲಿ ಸುಭದ್ರ ಸರ್ಕಾರದ ರಚನೆ ಭಾರತದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ನಮ್ಮನ್ನಾಳುವ ದೊರೆಗಳ ಆಯ್ಕೆ ಜನರಿಂದಲೇ ಎನ್ನುವ ಪ್ರಜಾಪ್ರಭುತ್ವ ಪರಿಕಲ್ಪನೆ ಜಗತ್ತಿಗೇ ಮಾದರಿಯಾಗಿದೆ. ಇಂತಹ ಪ್ರಜಾಪ್ರಭುತ್ವ ವ್ಯವಸ್ಥೆಯ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ. ಮತದಾನ ಸಂವಿಧಾನ ಬದ್ಧವಾಗಿ ನೀಡಿರುವ ಹಕ್ಕು.

6ನೇ ಪುಟಕ್ಕೆ

ಬೆಂಗಳೂರು ಗ್ರಾಮಾಂತರದಲ್ಲಿ ಯಾವುದೇ ರಣ ತಂತ್ರ ಮಾಡಿದರೂ ಮಂಜುನಾಥ್ ಗೆಲುವು ಶತಸಿದ್ಧ



■ ಕಾಯಕಯೋಗಿ ಸುದ್ದಿ

ಭಾರತೀನಗರ : ಬೆಂಗಳೂರು ಗ್ರಾಮಾಂತರದಲ್ಲಿ ಈಬಾರಿ ಯಾರು ಯಾವುದೇ ರಣ ತಂತ್ರ ಮಾಡಿದರೂ ಕೂಡ ಬಿಜೆಪಿ ಅಭ್ಯರ್ಥಿ ಡಾ.ಮಂಜುನಾಥ್ ಅವರು ಜಯಗಳಿಸುವುದು ನೂರಕ್ಕೆ ನೂರರಷ್ಟು ಸತ್ಯ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಭರವಸೆ ವ್ಯಕ್ತಪಡಿಸಿದರು.

ಭಾರತೀನಗರ ಜಿ.ಪಂ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಜೆಡಿಎಸ್, ಬಿಜೆಪಿ ಪಕ್ಷದ ಕಾರ್ಯಕರ್ತರನ್ನು ಭೇಟಿ ಮಾಡಿ ಚುನಾವಣಾ ಸಮೀಕ್ಷೆ ಪಡೆದು ನಂತರ ಡಿ.ಸಿ.ತಮ್ಮಣ್ಣ ಅವರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಮಂಜುನಾಥ್ ಅವರು ಜನರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿರುವ ಕೆಲಸಗಳು ಜನಮಾನಸದಲ್ಲಿದ್ದು, ಅಲ್ಲಿಯ ಜನರು ಅವರ ಕೈ ಬಿಟ್ಟಿಲ್ಲ. ಹಾಗಾಗಿ ಮಂಜುನಾಥ್ ಅವರ ಗೆಲುವು ನಿಶ್ಚಿತ.

ಬೆಂಗಳೂರು, ಮಂಡ್ಯ, ಹಾಸನ, ಹಾಗೂ ಕೋಲಾರ ಜಿಲ್ಲೆಗಳಲ್ಲಿ ಎನ್‌ಡಿಎ ಮೈತ್ರಿ ಕೂಟದ ಜೆಡಿಎಸ್ ಪಕ್ಷದ ಅಭ್ಯರ್ಥಿಗಳ ಗೆಲುವು ಶತಸಿದ್ಧ. ರಾಜ್ಯದಲ್ಲಿ ಉತ್ತಮ ಫಲಿತಾಂಶ ಎನ್‌ಡಿಎ ಮೈತ್ರಿಕೂಟಕ್ಕೆ ಬರಲಿದೆ. ಕೋಲಾರದಲ್ಲೂ ಕೂಡ ಎನ್ ಡಿಎ ಮೈತ್ರಿ ಕೂಟದ ಜೆಡಿಎಸ್ ಅಭ್ಯರ್ಥಿ ಜಯಿಗಳಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

6ನೇ ಪುಟಕ್ಕೆ

ವಿಕಲಚೇತನ ರಮೇಶ್ ಎಲ್ಲರಿಗೂ ಮಾದರಿ



ಮಂಡ್ಯ : ಮಂಡ್ಯ ಲೋಕಸಭಾ ಕ್ಷೇತ್ರದ ಮದ್ದೂರು ತಾಲ್ಲೂಕಿನ ಕೆ.ಹೊನ್ನಲಗೆರೆಯ ವಿಕಲಚೇತನ ಮತದಾರ ರಮೇಶ್ ಅವರು 75% ಅಂಗವಿಕಲತೆ ಹೊಂದಿದ್ದರೂ ಮತಗಟ್ಟೆಯಲ್ಲೇ ಮತದಾನ ಮಾಡಲು ಆಯ್ಕೆ ಮಾಡಿ ಇಂದು ಬೆಳಿಗ್ಗೆ ಮತಕೇಂದ್ರಕ್ಕೆ ತೆರಳಿ ಮತದಾನ ಮಾಡಿದ್ದಾರೆ.



ಮಳವಳ್ಳಿ ತಾಲ್ಲೂಕಿನ ಹುಸ್ಕೂರು ಗ್ರಾಮದ ವಾಸಿ ದಿವಂಗತ ಬೆಟ್ಟಯ್ಯನ ಪತ್ನಿ ಸಾಕಮ್ಮ(98) ಮತದಾನ ಚಲಾಯಿಸಿದರು.

ಮತದಾನ ಮಾಡುವುದು ನನ್ನ ಕರ್ತವ್ಯ: ಸುಮಲತಾ ಅಂಬರೀಶ್



ಭಾರತೀನಗರ: ಮತದಾನ ಮಾಡುವುದು ನನ್ನ ಕರ್ತವ್ಯ. ಅದನ್ನ ನಿರ್ವಹಿಸಿದ್ದೇನೆ. ದೇವೇಗೌಡರ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡಲ್ಲ. ಅವರಿಗೆ ಸರಿಯಾದ ಮಾಹಿತಿ ಇಲ್ಲದೆ ಆ ರೀತಿ ಹೇಳಿದ್ದಾರೆ. ಅವರಿಂದ ಅಂತಹ ಹೇಳಿಕೆ ನಿರೀಕ್ಷೆ ಮಾಡಿರಲಿಲ್ಲ ಎಂದು ಮಾಜಿ ಸಂಸದೆ ಸುಮಲತಾ ಅಂಬರೀಶ್ ಹೇಳಿದರು.

ದೊಡ್ಡರಸಿನಕೆರೆಯ ಮತಗಟ್ಟೆ ಸಂಖ್ಯೆ 167ರಲ್ಲಿ ಮತ ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರು ದೊಡ್ಡವರು. ಆದರೆ, ಸ್ವತಂತ್ರ ಸಂಸದೆಯಾಗಿ ನನ್ನ ಜವಾಬ್ದಾರಿಯನ್ನ ನಿರ್ವಹಿಸಿದ್ದೀನಿ. ಮೋದಿಯವರು ಪ್ರಧಾನಿಯಾಗಬೇಕೆಂಬ ಉದ್ದೇಶದಿಂದ ನಾನು ಗೆದ್ದಂತಹ ಸೀಟ್ ತ್ಯಾಗ ಮಾಡಿದ್ದೀನಿ. ಈ ಹಂತದಲ್ಲಿ ಅಂಬರೀಶ್ ಅವರ ಪಡೆಯ ಶಕ್ತಿಯನ್ನು ಕೂಡ ಎನ್‌ಡಿಎಗೆ ಕೊಟ್ಟಿದ್ದೇವೆ. ಮೈತ್ರಿ ಪರ ನಮ್ಮ ಬೆಂಬಲಿಗರು ನಿಷ್ಠೆಯಿಂದ ಕೆಲಸ ಮಾಡಿದ್ದಾರೆ ಎಂದರು.

ಆದರೆ, ಜಾ.ದಳದ ನಾಯಕರು ಯಾವುದೇ ಸಭೆ, ಪ್ರಚಾರಕ್ಕೆ ಆಹ್ವಾನಿಸಿಲ್ಲ. ಅವರು ಕರೆದು ನಾನು ಬರದೇ ಇದ್ದರೆ ತಪ್ಪಾಗುತ್ತಿತ್ತು. ಆದರೆ, ಅವರು ನನ್ನ ಕರೆದೇ ಇಲ್ಲ. ಇನ್ನು ಪ್ರಚಾರಕ್ಕೆ ಬರಲಿಲ್ಲ ಎಂಬುದಕ್ಕೆ ಅರ್ಥವಿದೆಯೇ ಎಂದು ಸುಮಲತಾ ಮರು ಪ್ರಶ್ನಿಸಿದರು. ನಾನಿಲ್ಲದೆ ಅವರು ಚುನಾವಣೆ ಮಾಡಿಕೊಳ್ಳುತ್ತೇವೆಂಬ ಭಾವನೆ ಇರಬಹುದು. ದೇವೇಗೌಡ ಅವರು ಹೇಳಿಕೆ ನೀಡಿದ ನಂತರ ನನಗೆ ಒಂದಷ್ಟು ಕರೆ ಬಂದವು. ನನ್ನ ಯಾವುದೇ ಪ್ರಚಾರಕ್ಕೆ ಕರೆದಿಲ್ಲ. ಕುಮಾರಸ್ವಾಮಿ ನಮ್ಮ ಮನೆಗೆ ಬಂದು ಹೋದ ನಂತರ ನನಗೆ ಒಂದು ಫೋನ್ ಮಾಡಿ ಪ್ರಚಾರಕ್ಕೆ ಬನ್ನಿ ಎಂದು ಕೇಳಿಲ್ಲ. ಇಷ್ಟು ತ್ಯಾಗ ಮಾಡಿಯೂ ನನ್ನ ಕರೆಯಲಿಲ್ಲ ಎನ್ನುವುದು ನನಗೆ ಬೇಸರವಾಯಿತು. ಹಾಗಿದ್ದರೆ ನಾನು ಮಾಡಿದ್ದು ತಪ್ಪಾ? ಎಂದರು.

ನನ್ನ ಅಭಿಮಾನಿಗಳು ಒಂದಷ್ಟು ಜನ ವಿರೋಧ ವ್ಯಕ್ತಪಡಿಸಿದರು. ಸೋತ ಸೀಟನ್ನೇ ಬಿಡಲ್ಲ, ಅಂತಹದರಲ್ಲಿ ನಾನು ಗೆದ್ದ ಸೀಟು ಬಿಟ್ಟು ಕೊಟ್ಟಿದ್ದಿನಿ. ಅವರ ಮನಸ್ಸಿನಲ್ಲಿ ಏನಿದೆ ಎಂಬುದು ನನಗೆ ಗೊತ್ತಿಲ್ಲ. ಆದರೆ, ಅವರು ನನ್ನ ಪ್ರಚಾರಕ್ಕೆ ಕರೆದಿಲ್ಲ. ಪಕ್ಷ ಸೂಚನೆ ನೀಡಿದ ಕಡೆ ಹೋಗಿ ನಾನು ಪ್ರಚಾರಕ್ಕೆ ಹೋಗಿದ್ದೇನೆ. ಮಂಗಳೂರುವರೆಗೂ ಹೋಗಿದ್ದೀನಿ. ಮಂಡ್ಯಕ್ಕೆ ಬರುತ್ತಿರಲಿಲ್ಲವೇ? ಆ ದಿನ ನನ್ನ ಸೀಟನ್ನ ಬಿಟ್ಟಾಗಲೂ ಬೇಸರವಾಗಿರಲಿಲ್ಲ. ಆದರೆ, ದೇವೇಗೌಡರ ಹೇಳಿಕೆ ನನಗೆ ಬೇಸರ ತರಿಸಿದೆ.

6ನೇ ಪುಟಕ್ಕೆ



ನಾಗಮಂಗಲ ತಾಲ್ಲೂಕಿನ ಚುಂಚನಹಳ್ಳಿ ಗ್ರಾಮದ ಸರ್ಕಾರಿ ಶಾಲೆಯ ಮತ ಕೇಂದ್ರದಲ್ಲಿ ಶ್ರೀಮಠದ ಹಿರಿಯ ಯತಿ ಪುರುಷೋತ್ತಮಾನಂದನಾಥ ಶ್ರೀಗಳೊಂದಿಗೆ ನಿರ್ಮಲಾನಂದನಾಥ ಶ್ರೀಗಳು ಮತ ಚಲಾಯಿಸಿದರು.

website: www.kayakayogi.com

ಕಾಯಕಯೋಗಿ

KAYAKA YOGI - Regional Daily


ಪುಟ-2 | 27-04-2024

ಮಂಡ್ಯ



ಹಲಗೂರು ಲೋಕಸಭಾ ಚುನಾವಣೆ ಹಿನ್ನೆಲೆ ಹಲಗೂರು ಹೋಬಳಿ ಬೆನಮನಹಳ್ಳಿ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಿದ ಲಿಂಗಪಟ್ಟಣ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ಸದಸ್ಯರು ಬಿ. ಆರ್. ಶಿವಕುಮಾರ್. ಮಾಜಿ ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಜೆಡಿಎಸ್ ಮುಖಂಡರಾದ ಲಿಂಗರಾಜು ಬಿ ಕೆ,ಅನಿಲ್ ಪಾಪಣ್ಣ,ಬಸವರಾಜು, ಟಿ ಪುಟ್ಟಸ್ವಾಮಿ, ಭೀಮೇಗೌಡ ,ರಾಮಕೃಷ್ಣ,ವೆಂಕಟೇಶ್ ಹಾಗೂ ಗ್ರಾಮಸ್ಥರು ಮತ ಹಾಕಿದ್ದರು.

ಜಿ.ಬಿ.ಶಿವಕುಮಾರ್ ಕುಟುಂಬಸ್ಥರಿಂದ ಮತದಾನ



■ ಕಾಯಕಯೋಗಿ ಸುದ್ದಿ

ಮಂಡ್ಯ : ಮಂಡ್ಯ ನಗರದ ಗೌಸಿಯಾಶಾಲೆಯ ಮತಗಟ್ಟೆಯಲ್ಲಿ ಲೋಕಸಭಾ ಚುನಾವಣೆಗೆ ಮಾಜಿ ಶಾಸಕ ಜಿ.ಬಿ.ಶಿವಕುಮಾರ್ ಮತ್ತು ಕುಟುಂಬಸ್ಥರು ಮತದಾನ ಮಾಡಿದರು.

ಮತದಾನ ಮಾಡಲು ಉತ್ತಮ ವ್ಯವಸ್ಥೆ ಮಾಡಲಾಗಿದೆ. ಮತದಾರರಿಗೆ ಬಿಸಿಲು ಕಾಣದಂತೆ ನೆರಳಿನ ವ್ಯವಸ್ಥೆ, ಕುಡಿಯಲು ನೀರು, ವಿಶೇಷಚೇತರಿಗೆ ವೀಲ್ ಚೇರ್‌ವ್ಯವಸ್ಥೆ ಉತ್ತಮವಾಗಿದೆ ಎಂದರು.

ಮತದಾನ ಮಾಡಲು ಎಲ್ಲರೂ ಪಾಲ್ಗೊಳ್ಳಬೇಕು. ಮತದಾನದ ಹಕ್ಕು ಉಳ್ಳವರು ತಪ್ಪದೇ ಮತದಾನ ಮಾಡಿ ಹೆಚ್ಚು ಫಲಿತಾಂಶ ಬರುವಂತೆ ಮಾಡಬೇಕು, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮಂಡ್ಯ ಅಭ್ಯರ್ಥಿಯಾಗಿ ನಿಂತಿರುವುದು ನಮ್ಮ ಸೌಭಾಗ್ಯ ಇಂತಹ ಅವಕಾಶವನ್ನು ನಾವು ಕಳೆದುಕೊಳ್ಳದೆ ಹೆಚ್ಚು ಬಹುಮತದಿಂದ ಗೆಲ್ಲಿಸೋಣ ಎಂದರು.

ಇದೇ ಸಂದರ್ಭದಲ್ಲಿ ಸ್ಥಳೀಯ ಮುಖಂಡರು ಇದ್ದರು.

ಕುಮಾರಸ್ವಾಮಿ ಗೆದ್ದು ಕೇಂದ್ರ ಕೃಷಿ ಮಂತ್ರಿಯಾಗುತ್ತಾರೆ: ಸಿಎಸ್ಪಿ

■ ಕಾಯಕಯೋಗಿ ಸುದ್ದಿ

ಪಾಂಡವಪುರ: ಮಂಡ್ಯ ಕ್ಷೇತ್ರದಲ್ಲಿ ಒನ್ ಸೈಡ್ ಚುನಾವಣೆ ನಡೆಯುತ್ತಿದೆ ಮಾಜಿ ಮುಖ್ಯಮಂತ್ರಿ ಹೆಚ್ ಡಿ ಕುಮಾರ್ ಸ್ವಾಮಿಯನ್ನು ಮಂಡ್ಯ ಲೋಕಸಭಾ ಕ್ಷೇತ್ರದ ಜನತೆ ಪ್ರಚಂಡ ಬಹುಮತಗಳಿಂದ ಗೆಲ್ಲಿಸುತ್ತಾರೆ ಎಂದು ಮಾಜಿ ಸಚಿವ ಸಿ.ಎಸ್ ಪುಟ್ಟರಾಜು ಹೇಳಿದರು.



ತಾಲ್ಲೂಕಿನ ಚಿನಕುರುಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಮತಗಟ್ಟೆ ಪತ್ನಿ ನಾಗಮ್ಮ ಜೊತೆಗೂಡಿ ಆಗಮಿಸಿದ ಮತದಾನ ಮಾಡಿದರು ಬಳಿಕ ಮಾತನಾಡಿದರು.ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಬಿರುಸಿನಿಂದ ಮತದಾನ ಪ್ರಾರಂಭವಾಗಿದೆ.

ಈ ಭಾರಿ ಮಂಡ್ಯದಲ್ಲಿ ನೂರಕ್ಕೆ ನೂರ ರಷ್ಟು ಇದು ಒನ್ ಸೈಡ್ ಚುನಾವಣೆ ಯಾಗಿ ಕಾಣುತ್ತಿದೆ. ಕ್ಷೇತ್ರ ಮಹಾಜನತೆ ಸ್ವಾಭಿಮಾನದಿಂದಬ ನಿರ್ಧಾರಗಳನ್ನು ಮಾಡಿ ಕುಮಾರಣ್ಣನಿಗೆ ಆಶೀರ್ವಾದ ಮಾಡುತ್ತಿದ್ದಾರೆ. ಮಂಡ್ಯದಲ್ಲಿ ಕುಮಾರಣ್ಣ ಪ್ರಚಂಡ ಬಹುಮತದಿಂದ ಗೆಲ್ಲಿಸುತ್ತಾರೆ.

ಸಿಎಂ ಆಗಿದ್ದ ಕಡಿಮೆ ಅವಧಿಯಲ್ಲಿ ರೈತರಿಗೆ ಕೊಟ್ಟ ಕೊಡುಗೆ, ಬಡವರಿಗಾಗಿ ನೀಡಿದ ಯೋಜನೆಗಳನ್ನು ಜನ ಮರೆತ್ತಿಲ್ಲ. ಅಲ್ಲದೆ ಅಧಿಕಾರ ಇಲ್ಲದಿದ್ದರೂ ಜನ ಸಾಮಾನ್ಯರ ಕಣ್ಣೀರು ಒರೆಸಿದ್ದಾರೆ. ತಾಯಂದಿರ ಕಷ್ಟಗಳಿಗೆ ಸ್ಪಂದಿಸಿದ್ದಾರೆ.

ಎದುರಾಳಿಗಳು ಸೋಲಿ ಹತಾಶೆಯಲ್ಲಿ ನಾಯಕರ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದು, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆರೋಪ ಸಾಮಾನ್ಯವಾಗಿದೆ ನಾವು ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ.

ಜನರು ಎಲ್ಲವನ್ನೂ ಸೂಕ್ಷ್ಮವಾಗಿ ಅವಲೋಚಿಸಿ ಈಭಾರಿ ಕುಮಾರಸ್ವಾಮಿ ಅವರನ್ನು ಭ್ರಜರಿಯಾಗಿ ಗೆಲ್ಲಿಸಿ ಕೇಂದ್ರದಲ್ಲಿ ಸಚಿವರಾಗಿ ಮಾಡುತ್ತಾರೆ ಎಂದರು.

ಡಾ.ಎಚ್.ಕೃಷ್ಣ ಕುಟುಂಬದಿಂದ ಮತದಾನ

■ ಕಾಯಕಯೋಗಿ ಸುದ್ದಿ

ಮಂಡ್ಯ : ಅಕೋಡೆನಗರದರಲ್ಲಿರುವ ನ್ಯಾಷನಲ್ ಚಿಲ್ಡ್ರನ್ ಶಾಲೆಯ ಮತಗಟ್ಟೆ ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಆಹಾರ ಆಯೋಗ ಅಧ್ಯಕ್ಷ ಡಾ.ಎಚ್.ಕೃಷ್ಣ ಮತ್ತು ಕುಟುಂಬ ಮತದಾನ ಮಾಡಿದರು.



ಸಂವಿಧಾನ ನಮಗೆ ನೀಡುವ ಮತದಾನದ ಹಕ್ಕನ್ನು ಚಲಾಯಿಸಬೇಕು. ಪ್ರತಿಯೊಬ್ಬರು ಪ್ರಜಾಪ್ರಭುತ್ವದಲ್ಲಿ ಮತದಾನವನ್ನು ಹಬ್ಬರೀತಿ ಸಂಭ್ರಮಿಸಿ ನಮ್ಮ ಅಭಿವ್ಯದ್ಧಿಗೆ ನಾವು ಸಾಕ್ಷಿ ನೀಡಬೇಕು ಎಂದು ಕೃಷ್ಣ ಹೇಳಿದರು.

ಪ್ರಜಾಪ್ರಭುತ್ವದಲ್ಲಿ ಮತದಾನ ಹಬ್ಬವಿದ್ದಗಾಗಿ, ಮತದಾನ ಮಾಡುವ ಮೂಲಕ ಸಂಭ್ರಮವನ್ನು ಕಾಣಬೇಕು. ಎಲ್ಲರೂ ಮತದಾನ ಮಾಡಿ, ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದು ನುಡಿದರು.

ಮತಗಟ್ಟೆಗಳನ್ನು ಬಹಾಳ ವ್ಯವಸ್ಥಿತವಾಗಿ ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಿದ್ದಾರೆ. ವಂಹಿಳೆಯರು, ವಿಶೇಷಚೇತನರು, ಯುವ ಮತದಾರರನ್ನು ಗಮನದಲ್ಲಿ ಇರಿಸಿಕೊಂಡು ಉತ್ತಮ ಮತಕೇಂದ್ರಗಳನ್ನು ನಿರ್ಮಾಣಮಾಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರಾದ ಚಂದ್ರಣ್ಣ, ರಾಜೇಶ್, ಮುರಳೀಧರ ಮತ್ತಿತರರಿದ್ದರು.

ಮತದಾನಕ್ಕಾಗಿ ಅಮೇರಿಕಾದ ಕ್ಯಾಲಿಫೋರ್ನಿಯದಿಂದ ಮಂಡ್ಯಕ್ಕೆ ಬಂದ ಕೆ ಎಸ್ ಪ್ರಕೃತಿ



ಮಂಡ್ಯ ನಗರದ ನಿವೃತ್ತ ತಹಶೀಲ್ದಾರ್ ಕೆ ಎಂ ಸ್ವಾಮಿಗೌಡ ಅವರ ಪುತ್ರಿ ಕೆ ಎಸ್ ಪ್ರಕೃತಿ ಅವರು ಅಮೇರಿಕಾದ ಕ್ಯಾಲಿಫೋರ್ನಿಯಾದಿಂದ ಮಂಡ್ಯಕ್ಕೆ ಆಗಮಿಸಿ ಮಂಡ್ಯ ವಿಶ್ವವಿದ್ಯಾನಿಲಯ ಮತಗಟ್ಟೆ ಸಂಖ್ಯೆ: 167 ರಲ್ಲಿ ಮತದಾನ ಮಾಡಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ್ದಾರೆ.

ನಿರೀಕ್ಷೆಗೂ ಮೀರಿದ ಬೆಂಬಲ ನಮಗಿದೆ: ಸುರೇಶ್‌ಗೌಡ

■ ಕಾಯಕಯೋಗಿ ಸುದ್ದಿ

ನಾಗಮಂಗಲ: ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಕಡೆಗಳಲ್ಲೂ ಅದರಲ್ಲಿಯೂ ನಮ್ಮ ನಾಗಮಂಗಲ ವಿಧಾನಸಭಾ ಕ್ಷೇತ್ರದಾದ್ಯಂತ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಣ್ಣರ ಬಗ್ಗೆ ನಮ್ಮ ನಿರೀಕ್ಷೆಗೂ ಮೀರಿದ ಬೆಂಬಲ ವ್ಯಕ್ತವಾಗುತ್ತಿದೆ ಎಂದು ಮಾಜಿ ಶಾಸಕ ಸುರೇಶ್‌ಗೌಡ ಹೆಚ್‌ಡಿಕೆ ಗೆಲುವಿನ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು.



ನಾಗಮಂಗಲ ಪಟ್ಟಣದ ತಾಲ್ಲೂಕು ಪಂಚಾಯ್ತಿ ಕಾರ್ಯಾಲಯ ಆವರಣದಲ್ಲಿನ ಮತ ಕೇಂದ್ರದಲ್ಲಿ ಕುಟುಂಬ ಸಮೇತ ಆಗಮಿಸಿ ತಮ್ಮ ಮತದಾನದ ಹಕ್ಕು ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಜಿಜೆಪಿ ಮತ್ತು ಜೆಡಿಎಸ್ ಮಾತ್ರವಲ್ಲದೆ ರಾಷ್ಟ್ರ ಪ್ರೇಮದ ಜೊತೆಗೆ ಕುಮಾರಣ್ಣರ ಮೇಲಿನ ಅಭಿಮಾನದಿಂದ ಕೆಲ ಕಾಂಗ್ರೆಸ್ ಕಾರ್ಯಕರ್ತರು ಪಕ್ಷಾತೀತವಾಗಿ ಕುಮಾರಣ್ಣರ ಪರವಾಗಿ ಮತದಾನ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಮಾತ್ರವಲ್ಲದೆ, ಇಲ್ಲಿನ ನಾಯಕನ ನಡೆಯ ವಿರುದ್ಧ ಕೇವಲ ಒಂದು ವರ್ಷ ತುಂಬುವುದರೊಳಗೆ ಬೇಸತ್ತಿದ್ದಾರೆ. ಈ ದೇಶದ ಪ್ರಧಾನಿಯಾಗಿ ದೆಹಲಿಯ ಕೆಂಪುಕೋಟೆಯ ಮೇಲೆ ತ್ರಿವರ್ಣ ಧ್ವಜಾರೋಹಣ ಮಾಡಿದ ಕರುನಾಡ ನೆಲದ ಮಣ್ಣಿನ ಮಗ ದೇವೇಗೌಡರ ಮಕ್ಕಳಾಗಿ ಎರಡು ಬಾರಿ ಈ ರಾಜ್ಯದ ಅಲ್ಪಾವಧಿಯ ಮುಖ್ಯಮಂತ್ರಿಗಳಾಗಿದ್ದವರ ಪರವಾಗಿ ಮತ ಚಲಾಯಿಸುವುದೇ ಒಂದು ಪುಣ್ಯ ಎಂಬ ಸದ್ಭಾವನೆ ಮತದಾರರಲ್ಲಿ ಅನಾರಣವಾಗಿದೆ. ಗ್ರಾಮೀಣ ಭಾಗದ ರೈತಾಪಿ ವರ್ಗ ಸೇರಿದಂತೆ ಎಲ್ಲಾ ವರ್ಗಗಳ ಮತದಾರರು ಈ ಚುನಾವಣೆಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ್ದಾರೆ. ಕುಮಾರಣ್ಣರ ಗೆಲುವು ಜೂ.04 ರಂದು ಅಧಿಕೃತವಾಗಿ ಘೋಷಣೆಯಾಗಬೇಕಿದೆ ಆಷ್ಟೆ, ಜನಾಭಿಪ್ರಾಯದಂತೆ ಈ ದಿನ ಗೆಲುವಿನ ಮುದ್ರೆಯನ್ನು ಮತದಾರರು ಒತ್ತಿದ್ದಾರೆ ಎಂಬ ಅಚಲವಾದ ನಂಬಿಕೆ ಇದೆ ಎಂದರು.

ಸ್ಟಾರ್ ಚಂದ್ರು ಗೆಲುವು ಖಚಿತ– ಹೆಚ್ ತ್ಯಾಗರಾಜು



ಪಾಂಡವಪುರ: ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳು ಪಕ್ಷಕ್ಕೆ ವರದಾನವಾಗಿದೆ ಈಭಾರಿ ಮಂಡ್ಯದಲ್ಲಿ ಜನ ಸ್ವಾಭಿಮಾನದ ನಿಲುವಿನಿಂದ ಪಕ್ಷದ ಅಭ್ಯರ್ಥಿ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಅವರನ್ನು ಗೆಲ್ಲಿಸಿ ದೇಶದಲ್ಲಿ ಕೈ ಹಾಗೂ ರಾಜ್ಯದಲ್ಲಿ ಕೈ ಬಲ ಪಡಿಸುತ್ತಾರೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹೆಚ್ ತ್ಯಾಗರಾಜು ಹೇಳಿದರು.

ಹೋಬಳಿ ಅಮ್ಮತಿ ಗ್ರಾಮದ ಮತಗಟ್ಟೆಗೆ ಶುಕ್ರವಾರ ನಡೆದ ಲೋಕಸಭಾ ಚುನಾವಣೆ ಹಿನ್ನೆಲೆ ತಮ್ಮ ಕುಟುಂಬ ಸಮೇತ ಆಗಮಿಸಿ ಮತದಾನ ಮಾಡಿದ ಬಳಿಕ ಮಾತನಾಡಿದ ಅವರು ಮೇಲುಕೋಟೆ ವಿಧಾನ ಸಭಾ ಕ್ಷೇತ್ರದಲ್ಲಿ ಬರಗಾಲದಂತಹ ಸಂರ್ಭದಲ್ಲೂ ಮಹಿಳೆಯರು ನೆಮ್ಮದಿಯಾಗಿ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ ಎಂದರೆ ಅದಕ್ಕೆ ಸಿದ್ದರಾಮಯ್ಯ ಹಾಗೂ ಡಿಕೆಶಿ ಅವರು ಕೊಟ್ಟ ಗ್ಯಾರಂಟಿ ಯೋಜನೆಗಳು. ಪ್ರತಿ ಮನೆಯಲ್ಲೂ ಹೆಣ್ಣುಮಕ್ಕಳು ಸಂತೋಷದಿಂದ ಕಾಂಗ್ರೆಸ್ ಗೆ ಬೆಂಬಲಿಸುತ್ತಿದ್ದಾರೆ.

ಮಂಡ್ಯದ ಜನತೆ ಸ್ವಾಭಿಮಾನದಿಂದ ನಮ್ಮ ಜಿಲ್ಲೆಯ ಮಗನಾದ ಸ್ಟಾರ್ ಚಂದ್ರು ಅವರನ್ನು ಗೆಲ್ಲಿಸುವುದು ಸತ್ಯವಾದ ಮಾತು. ಎದುರಾಳಿಗಳ ಯಾವುದೇ ತಂತ್ರಗಾರಿಕೆಗಳು ಮಂಡ್ಯದ ಜನರ ಮುಂದೆ ನಡೆಯುವುದಿಲ್ಲ. ಕ್ಷೇತ್ರದಲ್ಲಿ ರೈತ ಸಂಘ ಹಾಗೂ ಕಾಂಗ್ರೆಸ್ ಒಗ್ಗಟಿನಿಂದ ಕೆಲಸ ಮಾಡುತ್ತಿದ್ದು ನಮ್ಮ ಪಕ್ಷದ ಅಭ್ಯರ್ಥಿ ಗೆಲುವು ಖಚಿತ ಎಂದರು.

ಪ್ರಜಾಪ್ರಭುತ್ವದ ಉಳಿವಿಗಾಗಿ ಪ್ರತಿಯೊಬ್ಬರೂ ಕಡ್ಡಾಯವಾಗಿ ಮತ ಚಲಾಯಿಸಿ

ಮಳವಳ್ಳಿಮತದಾರ ಬಂಧುಗಳೇ ಏಳಿ ಎದ್ದೇಳಿ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವದ ಹಬ್ಬ ಆಚರಿಸೋಣವೆಂದು ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ಹಾಗೂ ವಕೀಲ ಎಂ.ಎಸ್.ಶ್ರೀಕಂಠಸ್ವಾಮಿ ಕರೆ ನೀಡಿದರು.



ಪಟ್ಟಣದ ಕೋಟೆ ರಾಮಮಂದಿರದ ಮತಗಟ್ಟೆ ಸಂಖ್ಯೆ:121 ರಲ್ಲಿ ಮುಂಜಾನೆ ಆಗಮಿಸಿ ಮೊದಲಿಗರಾಗಿ ಮತ ಚಲಾಯಿಸಿದ ನಂತರ ಜಿಲ್ಲಾ ಜನಜಾಗೃತಿ ವೇದಿಕೆವತಿಯಿಂದ ಅಭಿಯಾನ ನಡೆಸಿ ಮತದಾರರಿಗೆ ಜಾಗೃತಿ ಮೂಡಿಸಿ ಮಾತನಾಡಿದ ಅವರು ಮತದಾರರ ಬಂಧುಗಳೆ ಏಳಿ ಎದ್ದೇಳಿ,ಇಂದು ಮತದಾನ ಮಾಡುವ ಪವಿತ್ರವಾದ ದಿನ ಬಂದಿದೆ,ಇಂತಹ ದಿನವನ್ನು ನಿದ್ದೆ ಮಾಡಲು,ಮೋಜು ಮಸ್ತಿಗಾಗಿ ಬಳಸದೆ,ಮತ ಹಾಕುವ ಮೂಲಕ ತಮ್ಮ ಹಕ್ಕು ಚಲಾಯಿಸಿ ಸಂವಿಧಾನದ ಆಶಯಗಳನ್ನು ಈಡೇರಿಸೋಣ ಪ್ರಜಾಪ್ರಭುತ್ವದ ಹಬ್ಬ ಆಚರಿಸೋಣವೆಂದರು.

ಪ್ರಜಾಪ್ರಭುತ್ವವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಕಡ್ಡಾಯವಾಗಿ ಮತದಾನ ಮಾಡುವುದು ಕರ್ತವ್ಯವಾಗಿದೆ.ಮತ ಹಾಕದ ವ್ಯಕ್ತಿ ಜೀವಂತವಿದ್ದರೂ ಸತ್ತಂತೆ,ಸಂವಿಧಾನ ಶಿಲ್ಪಿ ಬಿ ಆರ್.ಅಂಬೇಡ್ಕರ್ ರವರು ನಮ್ಮನ್ನು ಆಳುವ ಸರ್ಕಾರ,ಜನಪ್ರತಿನಿಧಿಗಳು ಯಾವ ರೀತಿ ಇರಬೇಕು ಎಂಬುದಕ್ಕೆ ನಮಗೆಲ್ಲ ಮತ ಹಾಕುವ ಹಕ್ಕು ನೀಡಿದ್ದಾರೆ,ನಾವೆಲ್ಲರೂ ಮತ ಹಾಕಿ ನಮ್ಮನ್ನು ಆಳುವ ಸರ್ಕಾರ,ಜನಪ್ರತಿನಿಧಿಯಾವ ರೀತಿ ಇರಬೇಕು ಎಂದು ನಿರ್ದರಿಸುವ ಸುವರ್ಣವಕಾಸ ಈ ದಿನವಾಗಿದೆ,ಯಾವುದೇ ಕಾರಣಕ್ಕೂ ಇಂತಹ ಸುವರ್ಣ ದಿನವನ್ನು ನಿರ್ಲಕ್ಷಿಸೆ ಮಾಡದೆ ಮತ ದಾನ ಮಾಡುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿ ಹಿಡಿಯುವಂತೆ ಅವರು ಈ ಸಂದರ್ಭದಲ್ಲಿ ಮನವಿ ಮಾಡಿದರು.

ಮತ ಹಾಕಿದ್ದರೆ ಸೌಲಭ್ಯ ಕೇಳುವ ನೈತಿಕತೆ ಇರುವುದಿಲ್ಲ:ಭಾರತ ದೇಶದ ಪ್ರತಿಯೊಬ್ಬ ಪ್ರಜೆಯು ಕಡ್ಡಾಯವಾಗಿ ಮತ ಹಾಕುವ ಮೂಲಕ ಸಂವಿಧಾನ ಶಿಲ್ಪಿ ಅಂಬೇಡ್ಕರ್‌ರವರಿಗೆ ಗೌರವ ಸಲ್ಲಿಸಬೇಕು.ಮತ ಹಾಕದೆ ಇದ್ದರೆ, ಸಂವಿಧಾನಕ್ಕೆ ಆಗೌರವ ಸಲ್ಲಿಸದಂತಾಗುತ್ತದೆ.ಮತ ಹಾಕದೆ ಇದ್ದರೆ ಕಡಿಮೆ ಮತದಾನವಾಗಲಿದೆ,ಇದರಿಂದ ಉಳ್ಳವರಿಗೆ ಅನುಕೂಲವಾಗಲಿದೆ,ದೇಶದ ಸುಧದ್ರತೆಗೆ ಹಾಗೂ ನಮ್ಮೆಲ್ಲರ ರಕ್ಷಣೆ.ಪ್ರಜಾಪ್ರಭುತ್ವದ ಉಳಿವಿಗಾಗಿ ಮತ ಚಲಾಯಿಸುವಂತೆ ಅವರು ಸಲಹೆ ನೀಡಿದರು.

ರೈತ ಸಂಘ ಕಾಂಗ್ರೆಸ್ ಒಗ್ಗಟಿನ ಪ್ರತಿಫಲ ಸ್ಟಾರ್ ಚಂದ್ರು ಗೆಲುವು ಖಚಿತ

ಪಾಂಡವಪುರ: ರೈತಸಂಘ ಕಾಂಗ್ರೆಸ್ ಒಗ್ಗಟಿನ ಪ್ರತಿಫಲವಾಗಿ ಹಾಗೂ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಭಾಗ್ಯಗಳು ಈಭಾರಿ ಮಂಡ್ಯದಲ್ಲೂ ಕೈ ಹಿಡಿಯಲಿದೆ ಎಂದು ಮೇಲುಕೋಟೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ತಾಲ್ಲೂಕಿನ ಕ್ಯಾತನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಮತಗಟ್ಟೆಗೆ ಆಗಮಿಸಿ ಮತದಾನ ಮಾಡಿದ ಬಳಿಕ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಅವರ ಅಡಳಿತ ವೈಖರಿ ಮತ್ತು ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳು ಬರಗಾಲದಲ್ಲಿ ಗ್ರಾಮೀಣಾ ಪ್ರದೇಶದ ಜನರ ರೈತರ ಬಡವರಿಗೆ ವರದಾನವಾಗಿದ್ದು ಕಾಂಗ್ರೆಸ್ ಪಕ್ಷದ ಮೇಲೆ ಅಭಿಮಾನ ಹೆಚ್ಚಾಗಿದೆ. ನಂತರ ಪಾಂಡವಪುರ ಪಟ್ಟಣ, ಹಿರೇಮರಳಿ, ಹಾರೋಹಳ್ಳಿ, ಕೆನ್ನಾಳಿ, ನಾರಾಯಣಪುರ, ಚಿನಕುರಳಿ,ಜಕ್ಕನಹಳ್ಳಿ ,ದುದ್ದ, ಬೆಳ್ಳಾಳೆ, ಮಹದೇಶ್ವರಪುರ ಮತದಾನ ಪರಿಶೀಲನೆ ನಡೆಸಿದರು.

ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕುಮಾರಣ್ಣ ಗೆಲುವು ನಿಶ್ಚಿತ


ಮತಗಟ್ಟೆಗೆ ಆಗಮಿಸಿ ತಮ್ಮ ಮತದಾನದ ಹಕ್ಕು ಚಲಾಯಿಸಿದ ರಾಜಕೀಯ ನಾಯಕರು

■ ಕಾಯಕಯೋಗಿ ಸುದ್ದಿ

ಕೃಷ್ಣರಾಜಪೇಟೆ: ಪಟ್ಟಣದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಪದವಿ ಪೂರ್ವ ಕಾಲೇಜಿನ ಕಟ್ಟಡದಲ್ಲಿ ಸ್ಥಾಪಿಸಿರುವ ಮತಘಟ್ಟೆ ಸಂಖ್ಯೆ 137ರಲ್ಲಿ ಮಾಜಿಸಚಿವ ಡಾ. ನಾರಾಯಣ ಗೌಡ ಅವರು ತಮ್ಮ ಧರ್ಮಪತ್ನಿ ದೇವಕಿ, ಪುತ್ರಿ ನೇಹಾಗೌಡ ಅವರೊಂದಿಗೆ ಆಗಮಿಸಿ ಮತ ಚಲಾಯಿಸಿದರು.







ಶಾಸಕ ಹೆಚ್.ಟಿ.ಮಂಜು ತಮ್ಮ ಸ್ವಗ್ರಾಮ ಹರಳಹಳ್ಳಿಯ ಮತಗಟ್ಟೆಯಲ್ಲಿ ಪತ್ನಿ ರಮಾ ಮತ್ತು ಮಕ್ಕಳೊಂದಿಗೆ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರೆ, ಮಾಜಿಶಾಸಕ ಕೆ.ಬಿ.ಚಂದ್ರಶೇಖರ್ ಕೆಪಿಎಸ್ ಸ್ಕೂಲ್ ಮತಗಟ್ಟೆಯಲ್ಲಿ, ಮಾಜಿಶಾಸಕ ಬಿ.ಪ್ರಕಾಶ್ ಬೊಮ್ಮೇನಹಳ್ಳಿಯ ಮತಗಟ್ಟೆಯಲ್ಲಿ ಹಾಗೂ ಟಿಎಪಿಸಿಎಂಎಸ್ ಅಧ್ಯಕ್ಷ ಕಾಂಗ್ರೆಸ್ ನಾಯಕ ಬಿ.ಎಲ್.ದೇವರಾಜು ಬಂಡಿಹೊಳೆ ಗ್ರಾಮದ ಮತಗಟ್ಟೆಯಲ್ಲಿ ತಮ್ಮ ಪತ್ನಿಯೊಂದಿಗೆ ಮತ ಚಲಾಯಿಸಿದರು.

ತಾಲೂಕಿನ ಎಲ್ಲಾ 261 ಮತಗಟ್ಟೆಗಳಲ್ಲಿಯೂ ಯಾವುದೇ ಗಲಾಟೆ ಗದ್ದಲಗಳಿಲ್ಲದೇ ಶಾಂತಿಯುತವಾಗಿ ಮತ ಚಲಾವಣೆ ಮಾಡುವ ಮೂಲಕ ಸಾರ್ವಜನಿಕರು ಹಾಗೂ ರೈತಬಾಂಧವರು ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗವಹಿಸಿ ಸಂಭ್ರಮಿಸಿದರು.

ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿರುವ ಮಾಜಿ ಸಿಎಂ ಕುಮಾರಸ್ವಾಮಿ ಅವರು ಎರಡು ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಿ ಮತ್ತೊಮ್ಮೆ ದೇಶದ ಪ್ರಧಾನಿ ಯಾಗಲಿರುವ ನರೇಂದ್ರ ಮೋದಿಜಿ ಅವರ ಸಚಿವ ಸಂಪುಟದಲ್ಲಿ ಸಚಿವ ಸಂಪುಟದಲ್ಲಿ ಸಚಿವರಾಗಲ

website: www.kayakayogi.com

ಕಾಯಕಯೋಗಿ

KAYAKA YOGI - Regional Daily

ಪುಟ-3 | 27-04-2024

ಮೈಸೂರು

ವಿಶೇಷ ಮತಗಟ್ಟೆಗಳಲ್ಲಿ ವಿಶೇಷ ಉಡುಗೆತೊಟ್ಟು ಮಿಂಚಿದ ಸಿಬ್ಬಂದಿ

ನಂಜನಗೂಡು: ತಾಲ್ಲೂಕಿನ ವಿಶೇಷ ಮತಗಟ್ಟೆಗಳಲ್ಲಿ ಚುನಾವಣಾ ಸಿಬ್ಬಂದಿಗಳು ಉಡುಗೆ ತೊಟ್ಟು ಕರ್ತವ್ಯಕ್ಕೆ ಹಾಜರಾಗಿದ್ದು ಎಲ್ಲರ ಗಮನ ಸೆಳೆಯಿತು.

ತಾಂಡವಪುರ, ಹುಲ್ಲಹಳ್ಳಿ ಯತ್ನಿಕ್ ಮತಗಟ್ಟೆಯಲ್ಲಿ ಬಿಳಿಪಂಚೆ , ಬಿಳಿಶರ್ಟ್ , ಶಲ್ಯ ಮೈಸೂರು ಪೇಟ ತೊಟ್ಟಿದ್ದು ಸಖಿ ಮತಗಟ್ಟೆಗಳಲ್ಲಿ ಗುಲಾಬಿ ಬಣ್ಣದ ಉಡುಗೆತೊಟ್ಟಿದ್ದರು.

ಬಂಕಹಳ್ಳಿಯ ಹಾಡಿ ಮತಗಟ್ಟೆಗಳಲ್ಲಿ ಪುಕ್ಕದ ಕಿರೀಟ. ನಡುವಿಗೆ ಸೊಪ್ಪಿನಿಂದ ಸುತ್ತಿಕೊಂಡು ಗಮನ ಸೆಳೆದರೆ, ಇತ್ತ ದೇವಿರಮ್ಮನಹಳ್ಳಿ ಪಾಳ್ಯದ ಯುವ ಮತಗಟ್ಟೆಯಲ್ಲಿ ಸಿಬ್ಬಂದಿಗಳು ಗರಿ ಗರಿ ಕೋಟು ಧರಿಸಿ ಹಾಜರಿದ್ದರು.

ಸಿಂಧುವಳ್ಳಿ ಗ್ರಾಮ ಪಂಚಾಯಿತಿಯ ಕುರಹಟ್ಟಿ ಗ್ರಾಮದ ಸಖಿಮತಗಟ್ಟೆಗೆ ಸ್ವ ಸಹಾಯ ಸಂಘದ ಮಹಿಳೆಯರು ಪಿಂಕ್ ಸೀರೆ ಧರಿಸಿ ಹಕ್ಕು ಚಲಾಯಿಸಲು ಬಂದಿದ್ದು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.



ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸಿ ಕುಟುಂಬ ಸಮೇತರಾಗಿ ಮತ ಚಲಾಯಿಸಿದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

■ ಕಾಯಕಯೋಗಿ ಸುದ್ದಿ

ಮೈಸೂರು: ಎಲ್ಲೆಡೆ ಚುನಾವಣೆ ಹಬ್ಬದ ಸಂಭ್ರಮ ಮನೆ ಮಾಡಿದೆ . ಎಲ್ಲರೂ ತಮ್ಮ ಹಕ್ಕು ಚಲಾಯಿಸಲು ತುದಿಗಾಲಲ್ಲಿ ನಿಂತಿದ್ದಾರೆ..

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧೆ ಮಾಡಿರುವ ಮೈತ್ರಿ ಅಭ್ಯರ್ಥಿ ಮೈಸೂರಿನ ಯದುವಂಶದ ಕುಡಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕಣದಲ್ಲಿದ್ದು , ಮೈಸೂರು ಮತ್ತು ಕೊಡಗು ಭಾಗದ ಮೂಲೆ ಮೂಲೆಗೂ ತೆರಳಿ ಬಿರುಸಿನ ಮತಪ್ರಚಾರ ನಡೆಸಿದ್ದರು.

ಪ್ರತಿಭಾಗದಲ್ಲಿಯೂ ಯದುವೀರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದ್ದರು. ದಸರಾ ಮೆರವಣಿಗೆಯ ರೀತಿ ಎಲ್ಲೆಡೆ ಜಾತ್ರೆಯ ರೀತಿ ಜನರು ಸಂಭ್ರಮಿಸಿದ್ದರು.

ಇಂದು ಯದುವೀರ್ ತಮ್ಮ ಕುಟುಂಬದೊಂದಿಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ



ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸಿ ನಂತರ ಶಂಕರಮಠ ರಸ್ತೆಯ ಶ್ರೀಕಾಂತ ವಿಲಾಸ ವಿದ್ಯಾಲಯದಲ್ಲಿ ತಾಯಿ ಪ್ರಮೋದದೇವಿ ಒಡೆಯರ್, ಪತ್ನಿ ತ್ರಿಶಿಕಾ ಕುಮಾರಿ ಒಡೆಯರ್ ಅವರೊಂದಿಗೆ ಬಂದು ಮತದಾನ ಮಾಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ಅಭ್ಯರ್ಥಿಯಾಗಿ ಮತದಾನ ಮಾಡಿದ್ದೇನೆ ಅದಕ್ಕೆ ಖುಷಿಯಾಗುತ್ತಿದೆ. ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡಿ , ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ನಮ್ಮೆಲ್ಲರ ಹಕ್ಕು ,ಈ ಬಾರಿ ಬಿಜೆಪಿ ಹೆಚ್ಚಿನ ಮತಗಳಿಂದ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯದುವೀರ್ ಯುವ ಬ್ರಿಗೇಡ್ ವತಿಯಿಂದ ಚಾಮುಂಡೇಶ್ವರಿ ತಾಯಿಗೆ ವಿಶೇಷ ಪೂಜೆ

ಈ ಬಾರಿ ವೋಟಿ ಮತ್ತೆ ಪ್ರಧಾನಿಯಾಗಲಿ ಹಾಗೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಯದುವೀರ್ ಅವರು ಜಯಸಾಧಿಸಲಿ ಎಂದು ಚಾಮುಂಡೇಶ್ವರಿ ತಾಯಿಗೆ ಯದುವೀರ್ ಯುವ ಬ್ರಿಗೇಡ್ ವತಿಯಿಂದ ವಿಶೇಷ ಪೂಜೆ ಸಹ ಸಲ್ಲಿಸಲಾಗಿದೆ.

ಪೆನ್ಸಿಲ್ ಲೆಡ್ ನಲ್ಲಿ ಅರಳಿದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಅದ್ಭುತ ಕಲಾಕೃತಿ. ಉಡುಗೊರೆ ನೀಡಿದ ಕಲಾವಿದ*

ಮೈಸೂರಿನ ಪೆನ್ಸಿಲ್ ಲೆಡ್ ಕಾರ್ವಿಂಗ್ ಕಲಾವಿದರಾದ ನಂಜುಂಡಸ್ವಾಮಿ ಯವರು ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದ ಯದುವೀರ್ ಒಡೆಯರ್ ರವರಿಗೆ ವಿಶೇಷ ಉಡುಗೊರೆಯೊಂದನ್ನು ನೀಡಿದ್ದಾರೆ. ಅವರ ಭಾವಚಿತ್ರವನ್ನು ಪೆನ್ಸಿಲ್ ಲೆಡ್ ನಲ್ಲಿ ಮೂಡಿಸಿ ಅವರಿಗೆ ಉಡುಗೊರೆಯಾಗಿ ಕಲಾವಿದ ನಂಜುಂಡಸ್ವಾಮಿ ನೀಡಿದ್ದು ವಿಶೇಷವಾಗಿತ್ತು , ಅದನ್ನು ಸ್ವೀಕರಿಸಿದ ಯದುವೀರ್ ಅವರು ಕಲಾವಿದರಿಗೆ ಧನ್ಯವಾದ ಅರ್ಪಿಸಿದರು...

ಚುನಾವಣೆ ರಾಯಭಾರಿ ಹಿರಿಯ ಕ್ರಿಕೆಟ್ ಆಟಗಾರ ಜವಾಗಲ್ ಮತದಾನ



ಮೈಸೂರು: ಇಂದು ಮೈಸೂರು ಕೊಡಗು ಲೋಕಸಭಾ ಚುನಾವಣೆಯ ಚುನಾವಣೆ ರಾಯಭಾರಿ ಹಿರಿಯ ಕ್ರಿಕೆಟ್ ಆಟಗಾರ ಜವಾಗಲ್ ಶ್ರೀನಾಥ್ ನಗರದ ಜ್ಞಾನ ಗಂಗಾ ಪಿಯು ಕಾಲೇಜಿನ ಮತದಾನ ಮಾಡಿದರು

ಈ ಸಂದರ್ಭದಲ್ಲಿ ಮಾತನಾಡಿದ ಅವರು ಜನರು ಬೇಗ ಬೇಗ ಬಂದು ಮತದಾನ ಮಾಡಿ ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ಸಾಕಷ್ಟು ಮತದಾನ ಬಗ್ಗೆ ಜಾಗೃತಿ ಮೂಡಿಸಲಾಗಿದೆ ಮೈಸೂರು ಜಿಲ್ಲೆಯ ಚುನಾವಣಾ ರಾಯಭಾರಿ ಮತದಾನ ಮಾಡಿದ್ದೇನೆ ಮತದಾನ ನನ್ನ ಹಕ್ಕು ಎಲ್ಲರೂ ಮತದಾನ ಮಾಡಿ, ಮತದಾರರು ಬಂದು ನಿಮ್ಮ ನಾಯಕರನ್ನ ನೀವೇ ಆಯ್ಕೆ ಮಾಡಬೇಕು ಯುವ ಮತದಾರರು ಸಾಕಷ್ಟು ಸಂಖ್ಯೆಯಲ್ಲಿ ಇದ್ದರೆ ಯೋಚನೆ ಮಾಡಿ ಮತದಾನ ಮಾಡಿ ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

ಸರತಿ ಸಾಲಿನಲ್ಲಿ ನಿಂತು ಶಾಸಕ ದರ್ಶನ್ ಧ್ರುವನಾರಾಯಣ್ ಮತದಾನ



ನಂಜನಗೂಡು : ಇಂದು ನಡೆಯುತ್ತಿರುವ ಲೋಕಸಭಾ ಚುನಾವಣೆಯ ಹಿನ್ನೆಲೆ ಚಾಮರಾಜನಗರ ಜಿಲ್ಲೆಯ ಸ್ವಗ್ರಾಮ ಹೆಗ್ಗವಾಡಿ ಗ್ರಾಮದಲ್ಲಿ ಮತಗಟ್ಟೆ ಸಂಖ್ಯೆ 65 ರಲ್ಲಿ ನಂಜನಗೂಡು ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್, ಸಹೋದರ ಧೀರನ್ ಧ್ರುವನಾರಾಯಣ್ ಜೊತೆಗೂಡಿ ಕುಟುಂಬದ ಸದಸ್ಯರು ಹಾಗೂ ಕಾರ್ಯಕರ್ತರೊಂದಿಗೆ ತೆರಳಿ ಮತದಾನ ಮಾಡಿದರು.

ನಂತರ ಕಾರ್ಯಕರ್ತರ ಮತ್ತು ಸಂಬಂಧಿಕರ ಜೊತೆ ಸಂತಸ ವ್ಯಕ್ತಪಡಿಸಿ ಈ ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಅಭ್ಯರ್ಥಿಯಾಗಿರುವ ಸುನಿಲ್ ಬೋಸ್ ಗೆಲುವು ಖಚಿತ ಎಂದು ಮಾತನಾಡಿದರು.

ಮದುವೆ ಮಂಟಪದಂತೆ ಸಿಂಗಾರಗೊಂಡ ಮತದಾನ ಕೇಂದ್ರ ಬಿಳಿ ಪಂಚೆ ಶರ್ಟು ಮೈಸೂರು ಪೇಟ ತೊಟ್ಟು ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು..

■ ಕಾಯಕಯೋಗಿ ಸುದ್ದಿ

ನಂಜನಗೂಡು : ತೆಂಗಿನ ಗರಿಯ ಚಿಪ್ಪರ ಹಾಕಿ ಮಾವು, ಬಾಳೆ, ತಳಿರು ತೋರಣಗಳಿಂದ ಸಿಂಗಾರಗೊಂಡ ಮತದಾನ ಕೇಂದ್ರ, ಬಿಳಿ ಪಂಚೆ, ಶರ್ಟಿನ ಜೊತೆ ಮೈಸೂರು ಪೇಟ ಧರಿಸಿ ಚುನಾವಣಾ ಕರ್ತವ್ಯದಲ್ಲಿ ನಿರತರಾಗಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಗಾದ್ರೆ ವಿಭಿನ್ನ ಮತ್ತು ವಿಶೇಷ ಕಾರ್ಯವೈಕರಿಗೆ ಕಾರಣ ಏನು ಅಂತೀರಾ ಎಲ್ಲಿದೆ ನೋಡಿ..!

ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದ ಜೆಎಸ್ಎಸ್ ಕಾಲೇಜಿನ ಮತಗಟ್ಟೆಯಲ್ಲಿ ನಡೆಯುತ್ತಿರುವ ಮತದಾನದಲ್ಲಿ ಈ ದೃಶ್ಯ ಕಂಡು ಬಂದಿತು.



ಬಿಳಿ ಶರ್ಟ್ ಪಂಚೆ, ಮೈಸೂರು ಪೇಟ ಧರಿಸಿ ಚುನಾವಣಾ ಕರ್ತವ್ಯಕ್ಕೆ ಚುನಾವಣಾ ಸಿಬ್ಬಂದಿಗಳು ಹಾಜರಾಗಿದ್ದಾರೆ. ಪ್ರಜಾಪ್ರಭುತ್ವದ ಹಬ್ಬ ಆಚರಣೆಗೆ ಸಾಂಸ್ಕೃತಿಕ ಸೌರಭ ಎಂಬ ಮತಗಟ್ಟೆ ತೆರೆದು ವಿನೂತನವಾಗಿ ಅಧಿಕಾರಿಗಳು ಮತದಾನ ಮಾಡಿಸಿಕೊಳ್ಳುತ್ತಿದ್ದಾರೆ. ಚುನಾವಣೆಯಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಯುವ ಮತದಾರರನ್ನು ಸೆಳೆಯುವ ಪ್ರಯತ್ನದಲ್ಲಿ

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಖಿ, ರೈತ ಮತ್ತು ಯುವ ಮತಗಟ್ಟೆಗಳನ್ನು ತೆರೆಯಲಾಗಿದೆ. ಆದರೆ, ಇಲ್ಲಿ

ಮತಗಟ್ಟೆಗೆ ತೆಂಗಿನ ಗರಿಯ ಚಿಪ್ಪರಹಾಕಿ ಮಾವು ಬಾಳೆ ಕಟ್ಟಿ ಸ್ವಾಗತಿಸಲಾಗುತ್ತಿದೆ. ಚುನಾವಣಾ ಕರ್ತವ್ಯ ಅಧಿಕಾರಿಗಳ ಈ ಒಂದು ಪ್ರಜಾಪ್ರಭುತ್ವದ ಹಬ್ಬದ ಕಾರ್ಯವೈಕರಿಗೆ ಹ್ಯಾಟ್ಸಾಫ್ ಎನ್ನುತ್ತಾರೆ ಮತದಾರರು.

ಹಕ್ಕು ಚಲಾಯಿಸಿದ ಸುತ್ತೂರು ಶ್ರೀ



ನಂಜನಗೂಡು: ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆಯಿಂದಲೇ ಮತದಾನ ನಡೆಸಲಾಗುತ್ತಿದ್ದು, ವರುಣ ವಿಧಾನಸಭಾ ಕ್ಷೇತ್ರದ ನಂಜನಗೂಡು ತಾಲೂಕಿನ ಸುತ್ತೂರು ಗ್ರಾಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ. ಶ್ರೀಮಠದಿಂದ ನೇರವಾಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿರುವ ಮತಗಟ್ಟೆ ಕೇಂದ್ರಕ್ಕೆ ಆಗಮಿಸಿದ ಸುತ್ತೂರು ಶ್ರೀಗಳು, ತಮ್ಮ ಅತ್ಯಮೂಲ್ಯವಾದ ಮತವನ್ನು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವದ ಹಬ್ಬವನ್ನು ಆಚರಿಸಿದ್ದಾರೆ. ಐದು ವರ್ಷಗಳಿಗೊಮ್ಮೆ ಬರುವ ಚುನಾವಣೆಯಲ್ಲಿ ನಾವು ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಬೇಕು. ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಮತ ಹಾಕುವ ಹಕ್ಕನ್ನು ನೀಡಿದ್ದಾರೆ. ದಾನದಲ್ಲಿ ಶ್ರೇಷ್ಠ ದಾನ ಮತದಾನವಾಗಿದೆ. ಪ್ರತಿಯೊಬ್ಬರು ಮತದಾನ ಮಾಡಬೇಕು ಎಂದು ಹೇಳಿದರು.

ಹಕ್ಕು ಚಲಾಯಿಸಿದ ಅಪ್ಪ ಮಗ

■ ಕಾಯಕಯೋಗಿ ಸುದ್ದಿ

ನಂಜನಗೂಡು: ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಮತ್ತು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್ ಅವರ ಸ್ವಗ್ರಾಮ ನಂಜನಗೂಡು ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರದ ಹದಿನಾರು ಗ್ರಾಮದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನಿಲ್ ಬೋಸ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಹಕ್ಕು ಚಲಾಯಿಸಿದ್ದಾರೆ.

ಗ್ರಾಮದ ಸರ್ಕಾರಿ ಶಾಲೆಯಲ್ಲಿರುವ ಮತಗಟ್ಟೆಗೆ ಅಪ್ಪ ಮತ್ತು ಮಗ ಇಬ್ಬರು ಒಟ್ಟಿಗೆ ಬಂದು ತಮ್ಮ ಹಕ್ಕನ್ನು ಚಲಾಯಿಸಿ ಇಬ್ಬರು ಫೋಟೋ ಗೆ ಪೋಸ್ ಕೊಟ್ಟಿದ್ದಾರೆ.

ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಮಾತನಾಡಿ, ಡೆವಾಕ್ರಸಿಗೆ ಒಳ್ಳೆಯ ಬೆಳವಣಿಗೆ. ಪ್ರಜಾಪ್ರಭುತ್ವದ ನೆಲೆ ಉಳಿದುಕೊಳ್ಳಬೇಕು ಎಂದು ಹೇಳಿದರು.

ಮೈಸೂರು ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಇಬ್ಬರು ಅಭ್ಯರ್ಥಿಗಳ ನಡುವೆ



ಪೈಪೋಟಿ ಇದೆ. ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವ ವಿಶ್ವಾಸ ನಮಗಿದೆ. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಹೆಚ್ಚು ಬಹುಮತದಿಂದ ನಾವು ಗೆಲ್ಲುತ್ತೇವೆ ಎಂದು ಹದಿನಾರು ಗ್ರಾಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಹೇಳಿದರು.



ಮೈಸೂರು – ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದ ಎಂ ಲಕ್ಷ್ಮಣ್ ರವರು ನಗರದ ಸುನಂದ ಪೈಮರಿ ಶಾಲೆ, ಯಾದವ್ ಗಿರಿ, ಆಕಾಶ್ ವಾಣಿ ವೃತ್ತ, ಇಲ್ಲಿ ಕುಟುಂಬ ಸಮೇತರಾಗಿ ಬಂದು ಮತದಾನ ಮಾಡಿದರು.

ಮತಚಲಾಯಿಸಿ ಮನೆಗೆ ತೆರಳುತ್ತಿದ್ದ ಪಾದಚಾರಿಗೆ ಬೈಕ್ ಡಿಕ್ಕಿ; ಸ್ಥಳದಲ್ಲಿಯೇ ಪಾದಚಾರಿ – ಬೈಕ್ ಸವಾರ ಸಾವು

■ ಕಾಯಕಯೋಗಿ ಸುದ್ದಿ

ನಂಜನಗೂಡು: ಮತ ಚಲಾಯಿಸಿ ಮನೆಗೆ ತೆರಳುತ್ತಿದ್ದ ಪಾದಚಾರಿ ವ್ಯಕ್ತಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಪಾದ ಚಾರಿ ಮತ್ತು ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲ್ಲೂಕಿನ ತಾಂಡವಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ 40 ವರ್ಷದ ಶಿವಣ್ಣ, ಮತ್ತು 19 ವರ್ಷದ ಮಿಥುನ್ ಮೃತ ದುರ್ದೈವಿಗಳು. ಬೈಕ್ ಸವಾರ ತನ್ನ ಸ್ನೇಹಿತನೊಂದಿಗೆ ಚಾಮರಾಜನಗರ ತಾಲ್ಲೂಕಿನ ಗಾಳಿಪುರ ಗ್ರಾಮದಿಂದ ಮೈಸೂರಿಗೆ ತೆರಳುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ. ತಾಂಡವಪುರ ಗ್ರಾಮದಲ್ಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿ ವ್ಯಕ್ತಿಗೆ ಬೈಕ್ ಸವಾರ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ವ್ಯಕ್ತಿ ಶಿವಣ್ಣ ಮತ್ತು ಬೈಕ್ ಸವಾರ ಮಿಥುನ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಹಿಂಬದಿ ಸವಾರ ಅನಿಲ್ ಪಟೇಲ್ ಗೆ ಗಂಭೀರ ಗಾಯಗಳಾಗಿವೆ .





ವಿಷಯ ತಿಳಿದು ಸ್ಥಳಕ್ಕೆ ನಂಜನಗೂಡಿನ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದಾರೆ. ಅಪಘಾತದಲ್ಲಿ ಮೃತಪಟ್ಟಿರುವ ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ, ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜನಪ್ರತಿನಿಧಿಗಳಿಂದ ಹಕ್ಕು ಚಲಾವಣೆ: ತಮ್ಮನ ಜೊತೆ ಶಾಸಕ ಮತದಾನ



ಚಾಮರಾಜನಗರ: ಪ್ರಜಾಪ್ರಭುತ್ವದ ದೊಡ್ಡಹಬ್ಬವಾದ ಚುನಾವಣೆಯಲ್ಲಿ ಜನಪ್ರತಿನಿಧಿಗಳು ಕೂಡ ಉತ್ಸಾಹದಿಂದ ಮತದಾನ ನಡೆಸಿದ್ದಾರೆ. ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಯಳಂದೂರು ತಾಲೂಕಿನ ಉಪ್ಪಿನಮೋಳೆ ಗ್ರಾಮದಲ್ಲಿ ಹಕ್ಕು ಚಲಾಯಿಸಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್ ಮಹೇಶ್ ಕೊಳ್ಳೇಗಾಲದ ಶಂಕರಪುರ ಬಡಾವಣೆಯಲ್ಲಿ ಮತದಾನ ಮಾಡಿದರೇ ಹನೂರು ಮಾಜಿ ಶಾಸಕ ಆರ್.ನರೇಂದ್ರ ದೊಡ್ಡಿಂದುವಾಡಿ ಗ್ರಾಮದಲ್ಲಿ ಮತದಾನ ಮಾಡಿದ್ದಾರೆ.

ತಮ್ಮನ ಜೊತೆ ದರ್ಶನ್ ಮತದಾನ:

ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ ಚಾಮರಾಜನಗರ ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ತಮ್ಮ ಧೀರನ್ ಧ್ರುವನಾರಾಯಣ ಜೊತೆ ಮತದಾನ ಮಾಡಿದರು.

2013 ರಲ್ಲಿ ಮೊದಲ ಮತದಾನ ಮಾಡಿದ್ದ ದರ್ಶನ್ ಧ್ರುವನಾರಾಯಣ ಈಗ ಐದನೇ ಬಾರಿ ತಮ್ಮ ಹಕ್ಕು ಚಲಾಯಿಸಿದ್ದಾರೆ. ಮತದಾನದ ಬಳಿಕ ಮಾಧ್ಯಮವರೊಂದಿಗೆ ಅವರು ಮಾತನಾಡಿ, ಕಾಂಗ್ರೆಸ್ ಲೋಕಸಭಾ ಕ್ಷೇತ್ರದಲ್ಲಿ ಉತ್ತಮ ವಾತಾವರಣ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಗಳನ್ನು ಮನೆಮನೆಗೆ ತಲುಪಿಸಿದ್ದು ಈ ಬಾರಿ ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಲೀಡ್ ಬರಲಿದೆ, ಕಾಂಗ್ರೆಸ್ ಪರವಾದ ಅಲೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಇನ್ನು ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್ ಹಾಲಹಳ್ಳಿಯಲ್ಲಿ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅಲೂರು ಗ್ರಾಮದಲ್ಲಿ ಮತ ಚಲಾವಣೆ ಮಾಡಿದ್ದಾರೆ.



ಚಾಮರಾಜನಗರ*: ಚಾಮರಾಜನಗರ ಮೀಸಲು ಕ್ಷೇತ್ರದ ಮತದಾನ ರಾಯಭಾರಿ ನಟ ನಾಗಭೂಷಣ್ ಹಕ್ಕು ಚಲಾವಣೆ ಮಾಡಿದರು. ಸರತಿ ಸಾಲಲ್ಲಿ ನಿಂತು ಮತದಾನ ಮಾಡಿದ ಟಗರುಪಲ್ಯ ಹೀರೋಕೊಳ್ಳೇಗಾಲ ತಾಲೂಕಿನ ಟಗರಪುರ ಗ್ರಾಮದ ಮತಗಟ್ಟೆಯಲ್ಲಿ ಮತದಾನ ಮಾಡಿದರು.ಇನ್ನು ಲೈಂಗಿಕ ಅಲ್ಪಸಂಖ್ಯಾತೆ, ಮತದಾನ ರಾಯಭಾರಿ ದೀಪಾ ಬುದ್ಧೆಯಿಂದಚಾಮರಾಜನಗರ ತಾಲೂಕಿನ ಹೆಗ್ಗವಾಡಿಪುರದಲ್ಲಿ ತಮ್ಮ ಹಕ್ಕನ್ನು ಚಲಾಯಿಸಿದರು.

website: www.kayakayogi.com
ಕಾಯಕಯೋಗಿ
KAYAKA YOGI - Regional Daily
ಪುಟ-4
27-04-2024
ತುಮಕೂರು-ಚಾಮರಾಜನಗರ

ಜೋಳದ ಕಡ್ಡಿಗೆ ಆಕಸ್ಮಿಕ ಬೆಂಕಿ: ಲಕ್ಷಾಂ ರೂ. ನಷ್ಟ

ಹನೂರು: ಜೋಳದ ಕಡ್ಡಿಯ ಮೆದೆ ಹಾಗೂ ಉರುಳಿ ಮೆದೆಗೆ ಬೆಂಕಿ ತಗುಲಿದ ಪರಿಣಾಮ ಸುಮಾರು ಲಕ್ಷಾಂತರ ರೂ . ಮೌಲ್ಯದ ಮೇವಿನ ಕಡ್ಡಿಯ ರಾಶಿ ಬೆಂಕಿಗಾಹುತಿಯಾಗಿರುವ ಘಟನೆ ಬಂಡಳ್ಳಿಗ್ರಾಮದಲ್ಲಿ ಜರುಗಿದೆ.

ಹನೂರು ತಾಲ್ಲೂಕಿನ ಬಂಡಳ್ಳಿ ಗ್ರಾಮದ ಪ್ರಭು ಎಂಬುವವರು ತಮ್ಮ ಹಸುಗಳಿಗಾಗಿ ಜೋಳದ ಕಡ್ಡಿಯ ಹಾಗೂ ಉರುಳೆಯನ್ನು ಮೆದೆ ಹಾಕಿದ್ದರು.

ಆದರೆ ಶುಕ್ರವಾರ ಮಧ್ಯಾಹ್ನ 12 ಗಂಟೆ ವೇಳೆಯಲ್ಲಿ ಗಾಳಿಗೆ ವಿದ್ಯುತ್ ಕಂಬದಿಂದ ಬೆಂಕಿಯ ಕಿಡಿಯೊಂದು ಮೆದೆಗೆ ತಾಕಿ ಬೆಂಕಿ ಹೊತ್ತಿಕೊಂಡಿದೆ. ಇದು ಸ್ಥಳೀಯರ ಗಮನಕ್ಕೆ ಬಂದು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಅಗ್ನಿ ಶಾಮಕದಳದ ಅಧಿಕಾರಿಗಳು ಆಗಮಿಸುವ ಒಳಗಾಗಿ ಬೆಂಕಿಯ ಜ್ವಾಲೆ ಹೆಚ್ಚಾಗಿ ಹೊಸಿ ??ಳುರಿದು ಸುಮಾರು ಲಕ್ಷಾಂತರ ರೂ. ಮೌಲ್ಯದ ಮೇವು ಬೆಂಕಿಗಾಹುತಿಯಾಗಿದೆ. ಬಳಿಕ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದಾರೆ.



ಬುಡಕಟ್ಟು ಜನಾಂಗದವರ ಮೇಲೆ ಹಲ್ಲೆ: ಪರಿಹಾರಕ್ಕೆ ಗ್ರಾಮಸ್ಥರ ಒತ್ತಾಯ

■ ಕಾಯಕಯೋಗಿ ಸುದ್ದಿ

ಚಾಮರಾಜನಗರ : ಲೋಕಸಭಾ ಚುನಾವಣೆ ಸಂಬಂಧ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇಂಡಿಗನತ್ತ ಗ್ರಾಮಕ್ಕೆ ಮತ ಚಲಾಯಿಸಲು ತೆರಳಿದ್ದ ಆದಿವಾಸಿ ಬುಡಕಟ್ಟು ಜನಾಂಗದವರಿಗೆ ಹಲ್ಲೆ ಮಾಡಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ನಮ್ಮ ಜನಾಂಗದವರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.





ಹನೂರು ವಿಧಾನಸಭಾ ಕ್ಷೇತ್ರದ ಮಲೆ ಮಾದೇಶ್ವರ ಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಇಂಡಿಗನತ್ತ ಗ್ರಾಮದ ನಿವಾಸಿಗಳು ಲೋಕಸಭಾ ಚುನಾವಣೆಯನ್ನು ಬಹಿಷ್ಕಾರ ಮಾಡಿದ್ದರು. ಇದೆ ಮತಗಟ್ಟೆಗೆ ಮೆಂದಾರೆ ಗ್ರಾಮದ ಸುಮಾರು 50ಕ್ಕೂ ಹೆಚ್ಚು ಮತದಾರರು ಇದ್ದಾರೆ. ಇಂಡಿಗನತ್ತ ಗ್ರಾಮದವರು ಚುನಾವಣೆ ಬಹಿಷ್ಕಾರ ಮಾಡಿದ್ದ ಹಿನ್ನೆಲೆ ಮೆಂದಾರೆ ಗ್ರಾಮದವರು ಸಹ ಮತ ಹಾಕಲು ಹೋಗಿರಲಿಲ್ಲ. ಈ ವೇಳೆ ಪೊಲೀಸ್ ಸಿಬ್ಬಂದಿಗಳು ನೀವು ಮತ ಹಾಕಬಹುದು ಬನ್ನಿ ಎಂದು ತಿಳಿಸಿದಾಗ 50 ಮತದಾರರು ಮತ ಚಲಾವಣೆ ಮಾಡಲು ತೆರಳಿದ್ದಾರೆ. ಇವರು ಮತ ಚಲಾವಣೆ ಮಾಡಲು ಮತಗಟ್ಟೆಗೆ ಆಗಮಿಸಿದ ಹಿನ್ನೆಲೆ. ಇಂಡಿಗನತ್ತ ಗ್ರಾಮಸ್ಥರು ರೊಚ್ಚಿಗೆದ್ದು 50 ಜನರ ಮೇಲೆಯೂ ಸಹ ಹಲ್ಲೇ ಮಾಡಿದ್ದಾರೆ. ಹಲ್ಲೆಯಲ್ಲಿ ಗ್ರಾಮದ ಹಿರಿಯ ಮುಖಂಡರುಗಳಾದ ಮಾದಯ್ಯ, ಶಿವಕುಮಾರ್ ಸಣ್ಣಪ್ಪ ಎಂಬುವರ ಮೇಲೆ ತೀವ್ರ ಹಲ್ಲೆ ಮಾಡಿರುವುದರಿಂದ ತೀವ್ರ ಗಾಯಗೊಂಡಿದ್ದಾರೆ. ಇವರಿಗೆ ಪ್ರಥಮ ಚಿಕಿತ್ಸೆ ನೀಡಲಾಗಿದ್ದರು ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದೆ. ಆದರೆ ವಾಹನದ ವ್ಯವಸ್ಥೆ ಇಲ್ಲದೆ ಇರುವುದರಿಂದ ಗ್ರಾಮದಲ್ಲಿಯೆ ನರಳಾಡಿಕೊಂಡು ಇದ್ದಾರೆ ಎಂದು ತಿಳಿದು ಬಂದಿದೆ.

ಮೆಂದಾರೆ ಗ್ರಾಮದ ಮುಖಂಡರೊಬ್ಬರು ಮಾಕನಾಡಿ ರಸ್ತೆ, ವಿದ್ಯುತ್ ಹೊರತುಪಡಿಸಿ ಇನ್ನೆಲ್ಲ ಸೌಲಭ್ಯಗಳು ನಮಗೆ ಸರ್ಕಾರದಿಂದ ಸಿಗುತ್ತಿರುವುದರಿಂದ ಮತ ಮಾಡಲು ನಮಗೂ ಸಂತೋಷವಾಗಿತ್ತು. ಆದರೆ ಭಯದ ವಾತಾವರಣ ಇದ್ದದ್ದರಿಂದ ನಾವು ಮತ ಚಲಾವಣೆ ಮಾಡಲು ಹೋಗಿರಲಿಲ್ಲ ಆದರೆ ಪೊಲೀಸ್ ಸಿಬ್ಬಂದಿಗಳು ಬಂದು ನಿಮಗೆ ರಕ್ಷಣೆ ನೀಡುತ್ತೇವೆ ಬಂದು ಮತ ಚಲಾವಣೆ ಮಾಡಿ ಎಂದು ಮನವಿ ಮಾಡಿದ್ದ ಹಿನ್ನೆಲೆ ಮತ ಚಲಾವಣೆ ಮಾಡಲು ಬಂದಿದ್ದೆವು. ಆದರೆ ಇಂಡಿಗನತ್ತ ಗ್ರಾಮಸ್ಥರು ನಮ್ಮ ಮೇಲೆ ಏಕಾಏಕಿ ದಾಳಿ ಮಾಡಿ ಹಲ್ಲೆ ಮಾಡಿದ್ದಾರೆ, ಇದರಿಂದ ನಮಗೆ ತುಂಬಾ ಭಯವಾಗಿದ್ದು ಸರ್ಕಾರ ಸೂಕ್ತ ರಕ್ಷಣೆ ನೀಡಿ, ಹಲ್ಲೆ ಮಾಡಿರುವ ಸೂಕ್ತ ಕಾನೂನು ಕ್ರಮ ಜರುಗಿಸಬೇಕು, ಹಾಗೂ ನೊಂದವರಿಗೆ ಸರ್ಕಾರದಿಂದ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಹಲ್ಲೆ ಮಾಡಿದವರ ವಿರುದ್ಧ ದೂರು: ಮೆಂದಾರೆ ಗ್ರಾಮದ ಆದಿವಾಸಿ ಬುಡಕಟ್ಟು ಜನಾಂಗದವರ ಮೇಲೆ ಹಲ್ಲೆ ಮಾಡಿರುವ ಇಂಡಿಗನತ್ತ ಗ್ರಾಮಸ್ಥರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲು ಮಾಡಲು ಗ್ರಾಮಸ್ಥರು ನಿರ್ಧರಿಸಿದ್ದಾರೆ ಎಂದು ತಿಳಿದು ಬಂದಿದೆ.

ಸರ್ಕಾರಿ ಅಧಿಕಾರಿಗಳು ಆದಿವಾಸಿ ಬುಡಕಟ್ಟು ಮತದಾರರು ಮತದಾನದಲ್ಲಿ ಭಾಗವಹಿಸಬೇಕು ಈ ದೇಶದ ಪ್ರಜಾಪ್ರಭುತ್ವದಲ್ಲಿ ತಾವು ತಮ್ಮ ಮತವನ್ನು ಚಲಾವಣೆ ಮಾಡಬೇಕು ನಾವು ನಿಮಗೆ ಎಲ್ಲ ರೀತಿಯ ಅಭಿವೃದ್ಧಿ ಮಾಡಿಕೊಡುತ್ತೇವೆ ಎಂದು ಭರವಸೆ ನೀಡುತ್ತಾರೆ ಆದರೆ ನಾವು ಮತ ಚಲಾವಣೆ ಮಾಡಲು ನಮ್ಮನ್ನು ಹೊರದೂಡುತ್ತಿದ್ದಾರೆ ಇದು ಎಷ್ಟರ ಮಟ್ಟಿಗೆ ಸರಿ? ಮೆಂದಾರೆ ಗ್ರಾಮದವರು ಸರ್ಕಾರದ ಕಾನೂನಿಗೆ ಅಧಿಕಾರಿಗಳಿಗೆ ಗೌರವ ಕೊಟ್ಟು ಮತದಾನ ಮಾಡಲು ಬಂದರೆ ಇವರನ್ನು ಮತದಾನ ಮಾಡಬೇಡಿ ಎಂದು ಮತದಾನದ ಹಕ್ಕನ್ನು ಕಳುಹಿಸಿಕೊಳ್ಳಲು ಇವರು ಯಾರು ಎಂದು ಸೋಲಿಗ ಜನಾಂಗದ ಮುಖಂಡ ಮುತ್ತಯ್ಯ ಪ್ರಶ್ನೆ ಮಾಡಿದ್ದಾರೆ.

ಆದಿವಾಸಿ ಜನಾಂಗದವರ ಮೇಲೆ ಸಮುದಾಯದವರು ಹಲ್ಲೆ ಮಾಡಿರುವುದನ್ನು ಖಂಡಿಸಿ ಆದಿವಾಸಿ ಬುಡಕಟ್ಟು ಜನಾಂಗದ ನಾಳೆ ಮಲೆ ಮಹದೇಶ್ವರ ಬೆಟ್ಟದಲ್ಲಿ ಪ್ರತಿಭಟನೆ ನಡೆಸುವುದಾಗಿ ಜನಾಂಗದ ಮುಖಂಡರೊಬ್ಬರು ಪತ್ರಿಕೆಗೆ ತಿಳಿಸಿದ್ದಾರೆ.

> ಮೆಂದಾರೆ ಗ್ರಾಮದ ಸುಮಾರು 50ಕ್ಕೂ ಹೆಚ್ಚು ಜನರ ಮೇಲೆ ಹಲ್ಲೆ ಮಾಡಿರುವ ಇಂಡಿಗನತ್ತ ಗ್ರಾಮಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು, ಇವರಿಗೆ ರಕ್ಷಣೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮುಖಾಂತರ ತಿಳಿಸಿದ್ದೇನೆ. ಈ ಘಟನೆಯ ಸಂಬಂಧ ಸಮಗ್ರ ತನಿಖೆಗೆ ಎಂದು ಒತ್ತಾಯಿಸುತ್ತೇನೆ.
>
> **–ಮುತ್ತಯ್ಯ,** ಕಾರ್ಯದರ್ಶಿ ರಾಜ್ಯ ಮೂಲ ಆದಿವಾಸಿ ವೇದಿಕೆ ಕರ್ನಾಟಕ



ಮತದಾನ ಮಾಡಲು ಆಟೋ ರಿಕ್ಷಾ ವ್ಯವಸ್ಥೆ

ಗುಂಡ್ಲುಪೇಟೆ :– ತಾಲ್ಲೂಕಿನ ಪಡುಗೂರು ಗ್ರಾಮ ಪಂಚಾಯಿತಿ ವತಿಯಿಂದ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಅಂಗವೀಕಲರು ವೃದ್ಧರು ಆರೋಗ್ಯ ಸಮಸ್ಯೆ ಇರುವವರು ಮತದಾನದ ಕೇಂದ್ರಗಳಿಗೆ ಹೋಗಿ ಮತದಾನ ಮಾಡಿ ಬರಲು ಆಟೋ ರಿಕ್ಷಾ ವ್ಯವಸ್ಥೆ ಮಾಡಲಾಗಿತ್ತು.

ಆಟೋ ರಿಕ್ಷಾ ಚಾಲಕನ ಜೊತೆಯಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿ ಒಬ್ಬರನ್ನು ನೇಮಕ ಮಾಡಿ ಸಿಬ್ಬಂದಿ ಬೆಳಿಗ್ಗೆ ಯಿಂದಲೂ ಸಂಜೆ ವರೆಗೂ ಪ್ರತಿ ಮನೆಗಳಿಗೂ ತೆರಳಿ ಗ್ರಾಮಗಳಲ್ಲಿ ಇರುವ ಅಂಗವೀಕಲರು ವೃದ್ಧರು ಆರೋಗ್ಯ ಸಮಸ್ಯೆ ಇರುವವರನ್ನು ಎಲ್ಲರನ್ನೂ ಮತಗಟ್ಟೆಗೆ ಕರೆತಂದು ಮತದಾನವನ್ನು ಮಾಡಿಸಿದ್ದಾರೆ.

ಬಾಕ್ಸ್:– ಕಳೆದ ಚುನಾವಣೆಗಳಲ್ಲಿ ಅಂಗವೀಕಲರು ವೃದ್ಧರು ಆರೋಗ್ಯ ಸಮಸ್ಯೆ ಇರುವವರನ್ನು ಮತದಾನ ಕೇಂದ್ರಗಳಿಗೆ ಕರೆತರಲು ವಾಹನ ವ್ಯವಸ್ಥೆ ಮಾಡಿರಲಿಲ್ಲ ಈ ಲೋಕಸಭಾ ಚುನಾವಣೆಯಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ವಾಹನ ವ್ಯವಸ್ಥೆ ಮಾಡಿರುವ ಕಾರಣ ಎಲ್ಲರೂ ಮತದಾನ ಕೇಂದ್ರ ಕ್ಕೆ ತೆರಳಿ ಮತದಾನ ಮಾಡಲು ಅನುಕೂಲ ವಾಗಿದೆ. ಮೊದಲು ವಿವಿಧ ಪಕ್ಷದವರು ಅವರ ವಾಹನಗಳಲ್ಲಿ ಕರೆದುಕೊಂಡು ಹೋಗಿ ಅವರ ಇಷ್ಟ ಬಂದ ಅಭ್ಯರ್ಥಿ ಗಳಿಗೆ ಮತದಾನ ಮಾಡಿಸುತ್ತಿದ್ದರು, ಈ ವ್ಯವಸ್ಥೆಯಿಂದ ಇದು ತಪ್ಪಿದ್ದು ಸ್ವತಂತ್ರವಾಗಿ ಮತದಾರರು ಅವರಿಗೆ ಬೇಕಾದ ಅಭ್ಯರ್ಥಿಗಳಿಗೆ ಮತದಾನ ಮಾಡಿಬರಲು ಅನುಕೂಲ ಕಲ್ಪಿಸುವ ವ್ಯವಸ್ಥೆ ಮಾಡಿದ್ದಾರೆ.

ಬಸವರಾಜು (ರವಿ) ಎಸ್. ಎಂ, ಶ್ಯಾನಾಡ್ರಹಳ್ಳಿ ಗ್ರಾಮಸ್ಥರು.

ಅಧಿಕಾರಿಗಳ ಮೇಲೆ ಕಲ್ಲು ತೂರಾಟ: ಮತ ಯಂತ್ರಕ್ಕೆ ಬೆಂಕಿ





■ ಕಾಯಕಯೋಗಿ ಸುದ್ದಿ

ಚಾಮರಾಜನಗರ: ಲೋಕಸಭಾ ಚುನಾವಣೆ ಬಹಿಷ್ಕಾರ ಮಾಡಿದ್ದ ಇಂಡಿಗನತ್ತ ಗ್ರಾಮಸ್ಥರನ್ನು ಮನವೊಲಿಸಲು ತೆರಳಿದ್ದ ಅಧಿಕಾರಿಗಳ ಮೇಲೆ ಕಲ್ಲುತೂರಾಟ ನಡೆಸಿ, ಮತ ಯಂತ್ರಗಳನ್ನು ಸುಟ್ಟು ಹಾಕಿರುವ ಘಟನೆ ಶುಕ್ರವಾರ ಮಧ್ಯಾಹ್ನ ಜರುಗಿದೆ.

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಇಂಡಿಗನತ್ತ ಗ್ರಾಮದಲ್ಲಿ ಸುಮಾರು 800 ಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಇಂಡಿಗನತ್ತ ಗ್ರಾಮಕ್ಕೆ ಸ್ವಾತಂತ್ರ್ಯ ಬಂದು 77 ವರ್ಷಗಳು ಕಳೆದರು ಮೂಲಭೂತ ಸೌಲಭ್ಯಗಳನ್ನು ಒದಗಿಸಿಲ್ಲ ಈ ಹಿನ್ನೆಲೆ ಲೋಕಸಭಾ ಚುನಾವಣೆ ಬಹಿಷ್ಕಾರ ಮಾಡುವುದಾಗಿ ಎಚ್ಚರಿಕೆ ನೀಡಿ ಮಲೆ ಮಹದೇಶ್ವರ ಬೆಟ್ಟದಲ್ಲಿ ಬೃಹತ್ ಪ್ರತಿಭಟನೆಯನ್ನು ನಡೆಸಿದ್ದರು. ತದನಂತರ ಜಿಲ್ಲಾಧಿಕಾರಿ ಸಿ .ಪಿ.ಶಿಲ್ಪಾ ನಾಗ್, ಕೊಳ್ಳೇಗಾಲ ಉಪ ವಿಭಾಗಾಧಿಕಾರಿ ಶಿವಮೂರ್ತಿ,ಇಒ ಉಮೇಶ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲಾಗುವುದು ನೀವು ಮತದಾನ ಮಾಡಿ ಎಂದು ಮನವಿ ಮಾಡಿದ್ದರು. ತದನಂತರ ವಲ್ಲದ ಮನಸ್ಸಿನಿಂದ ಅಧಿಕಾರಿಗಳ ಭರವಸೆಯ ಮಾತಿಗೆ ಒಪ್ಪಿಕೊಂಡಿದ್ದರು. ಯುಗಾದಿ ಹಬ್ಬದ ಸಂದರ್ಭದಲ್ಲಿ ಕಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದ ಹಿನ್ನೆಲೆ ಮತ್ತೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ನಾವು ಚುನಾವಣೆಯನ್ನು ಬಹಿಷ್ಕಾರ ಮಾಡುತ್ತೇವೆ ಎಂದು ಪತ್ರ ಬರೆದಿದ್ದರು. ಇದೆ ವೇಳೆಯೂ ಜಿಲ್ಲಾಧಿಕಾರಿಗಳು ನಿಮ್ಮ ಸಮಸ್ಯೆಯನ್ನು ಬಗೆಹರಿಸಲಾಗುವುದು ಮತದಾನದಲ್ಲಿ ಪಾಲ್ಗೊಳ್ಳಿ ಎಂದು ಭರವಸೆ ನೀಡಿದ್ದರು. ಇಷ್ಟಾದರೂ ಸಹ ಗ್ರಾಮಸ್ಥರು ಜಿಲ್ಲಾಧಿಕಾರಿಗಳ ಮಾತಿಗೂ ಮುನ್ನಡೆ ನೀಡದೆ ವಾಪಾಸ್ ತೆರಳಿದ್ದರು.

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರಕ್ಕೆ ಏಪ್ರಿಲ್ 26ರಂದು ಚುನಾವಣೆ ನಿಗದಿಯಾಗಿದ್ದು ಹಿನ್ನೆಲೆ ಏಪ್ರಿಲ್ 25ರಂದು ಇಂಡಿಗನತ್ತ ಗ್ರಾಮದ ಮತಗಟ್ಟೆ ಸಂಖ್ಯೆ 146 ಕ್ಕೆ ಮತ ಯಂತ್ರಗಳನ್ನು ತೆಗೆದುಕೊಂಡು ಹೋಗಲಾಗಿತ್ತು. ಏಪ್ರಿಲ್ 26ರ ಬೆಳಿಗ್ಗೆಯೂ ಸಹ ಗ್ರಾಮಸ್ಥರು ಮತದಾನ ಬಹಿಷ್ಕಾರ ಮಾಡುವುದಾಗಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳ ಮೂಲಕ ಹರಿಬಿಟ್ಟಿದ್ದರು. ಈ ಹಿನ್ನೆಲೆ ಹನೂರು ತಾಲೂಕಿನ ತಹಸೀಲ್ದಾರ್ ಗುರುಪ್ರಸಾದ್, ಇಒ ಉಮೇಶ್, ಮಹದೇಶ್ವರ ಬೆಟ್ಟ ಇನ್ಸ್ಪೆಕ್ಟರ್ ಜಗದೀಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಮನವೊಲಿಸಲು ತೆರಳಿದ್ದರು. ಇದೆ ವೇಳೆ ಮೆಂದಾರ ಗ್ರಾಮದ ಸೋಲಿಗ ಕುಟುಂಬದವರನ್ನು ಭೇಟಿ ಮಾಡಿ ಮತ ಹಾಕುವಂತೆ ಮನವೊಲಿಸಿದ್ದರು. ಇವರು ಮತ ಚಲಾವಣೆ ಮಾಡಲು ಮತಗಟ್ಟೆಗೆ ಆಗಮಿಸಿ 9 ಮತ ಚಲಾವಣೆ ಮಾಡಿದ್ದರು. ಮಾಹಿತಿ ತಿಳಿದ ಇಂಡಿಗನತ್ತ ಗ್ರಾಮಸ್ಥರು ಮೆಂದಾರೆ ಗ್ರಾಮದವರ ಜೊತೆ ವಾಗ್ವಾದ ನಡೆಸಿ ಪೊಲೀಸರ ಮುಂದೆಯೇ ಜಟಾಪಟಿಗೆ ಮುಂದಾಗಿದ್ದರು ಎನ್ನಲಾಗಿದೆ. ಗ್ರಾಮಸ್ಥರನ್ನು ನಿಯಂತ್ರಿಸಲು ಲಘು ಲಾಟಿ ಪ್ರಹಾರ ನಡೆಸಲು ಮುಂದಾದ ಪೊಲೀಸರ ವರ್ತನೆಗೆ ರೊಚ್ಚಿಗೆದ್ದ ಗ್ರಾಮಸ್ಥರು ಅಧಿಕಾರಿಗಳ ಮೇಲೆ ಕಲ್ಲುತೂರಾಟ ನಡೆಸಿ, ಡೀಸೆಲ್ ಪೆಟ್ರೋಲ್ ಎರಚಿ ಬೆಂಕಿ ಹಾಕಿದ್ದಾರೆ. ನಂತರ ಮತಗಟ್ಟೆಗೆ ನುಗ್ಗಿ ಮತಯಂತ್ರ ಹಾಗೂ ಮತದಾನಕ್ಕೆ ತೆಗೆದುಕೊಂಡು ಹೋಗಲಾಗಿದ್ದ ಪರಿಕರಗಳನ್ನು ಸುಟ್ಟು ಹಾಕಿದ್ದಲ್ಲದೆ ಶಾಲೆಯ ಕಿಟಕಿ ಹಾಗೂ ಹಲವು ಸಾಮಗ್ರಿಗಳನ್ನು ಧ್ವಂಸ ಮಾಡಿ ತಮ್ಮ ಆಕ್ರೋಶ ಹೊರಹಾಕಿದ್ದಾರೆ. ಕಲ್ಲುತೂರಾಟದಲ್ಲಿ ತಹಸೀಲ್ದಾರ್ ಗುರುಪ್ರಸಾದ್ ಇನ್ಸ್ಪೆಕ್ಟರ್ ಜಗದೀಶ್, ಪಿಡಿಒ ಕಿರಣ್, ಮತಗಟ್ಟೆಯ ಸಿಬ್ಬಂದಿ ಮೇರಿ, ಪೊಲೀಸ್ ಪೇದೆ ಸೇರಿದಂತೆ ಹಲವರು ಗಾಯಗೊಂಡಿದ್ದಾರೆ. ಇನ್ನು ಕೆಲವು ಅಧಿಕಾರಿಗಳು ತಪ್ಪಿಸಿಕೊಂಡು ಬಚಾವಾಗಿದ್ದರು. ಮಾಹಿತಿ ತಿಳಿದ ಪೊಲೀಸ್ ಅಧಿಕಾರಿಗಳು ಹೆಚ್ಚುವರಿ ಸಿಬ್ಬಂದಿಗಳನ್ನು ಕರೆಸಿ ಹೆಚ್ಚಿನ ಅನಾಹುತ ಆಗದಂತೆ ಕ್ರಮ ಕೈಗೊಂಡಿದ್ದಾರೆ. ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ಸಲ್ಲಿಸಲು ಕ್ರಮ ವಹಿಸಲಾಗಿದ್ದು, ಮತದಾನಕ್ಕೆ ಅಡ್ಡಿಪಡಿಸಿದ ಮತ್ತು ಚುನಾವಣೆಗೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿಗಳ ಮೇಲೆ ಘೋರ ಹಲ್ಲೆ ನಡೆಸಿರುವ ಇಂಡಿಗನತ್ತ ಗ್ರಾಮಸ್ಥರ ವಿರುದ್ಧ ಪ್ರಜಾ ಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 132,135,136 ಐ.ಪಿ ಸಿ ಸೆಕ್ಷನ್ 506,425ರ ಪ್ರಕಾರ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರು

ಮೂರು ಲಕ್ಷ ಮತಗಳ ಅಂತರದಿಂದ ಸುನೀಲ್ ಬೋಸ್ ಗೆಲುವು: ಎಸ್ ಜಯಣ್ಣ



ಯಳಂದೂರು: ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್ ರವರು ಮೂರು ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸುತ್ತಾರೆ ಎಂದು ಮಾಜಿ ಶಾಸಕ ಹಾಗೂ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್ ಜಯಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ಸ್ವಗ್ರಾಮವಾದ ಮಾಂಬಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಮತ ಚಲಾಯಿಸಿ ಮಾತಾನಾಡಿದ ಅವರು ಈ ಚುನಾವಣೆಯಲ್ಲಿ ಚಾಮರಾಜನಗರ ಲೋಕಸಭೆ ಕ್ಷೇತ್ರ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿದ್ದು ಈ ಕ್ಷೇತ್ರವು ಮರಳಿ ಕಾಂಗ್ರೆಸ್ ಪಕ್ಷದ ತೆಕ್ಕೆ ಬರುತ್ತದೆ. ಸುನೀಲ್ ಬೋಸ್ ಮೈರು ಲಕ್ಷ ಮತಗಳ ಅಂತರದಿಂದ ಭರ್ಜರಿಯಾಗಿ ಗೆಲ್ಲಲಿದ್ದಾರೆ ಎಂದರು.

ಬಿಜೆಪಿ ಅಭ್ಯರ್ಥಿ ಗ್ರಾಮಕ್ಕೆ ಶಾಸಕ ಎ ಆರ್ ಕೃಷ್ಣಮೂರ್ತಿ

ತಾಲೂಕಿನ ಮದ್ದೂರು ಗ್ರಾಮದಲ್ಲಿ ಹಾಲಿ ಶಾಸಕ ಎ ಆರ್ ಕೃಷ್ಣಮೂರ್ತಿ ರವರು ಕಾರ್ಯಕರ್ತರನ್ನು ಮಾತಾನಾಡಿಸಿ ಚುನಾವಣೆ ಹೇಗೆ ನಡೆಯುತ್ತಿದೆ ಎಂಬುದನ್ನು ಕಾರ್ಯಕರ್ತರನದನು ಬೇಟಿ ಮಾಡಿ ಮಾಹಿತಿ ಪಡೆದುಕೊಂಡರು.

ಮದ್ದೂರು ಗ್ರಾಮವು ಬಿಜೆಪಿ ಅಭ್ಯರ್ಥಿ ಎಸ್ ಬಾಲರಾಜು ರವರ. ಸ್ವಗ್ರಾಮವಾಗಿದ್ದು ಶಾಸಕರ ಬೇಟಿಯು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹುರುಪು ಹುಮ್ಮಡಿಗೊಂಡಿತು.

ಈ ಸಂದರ್ಭದಲ್ಲಿ ಕಾಂಗ್ರೆಸ್ ನಿವೃತ್ತ ತಹಶೀಲ್ದಾರ್ ಸಿ.ಮಹದೇವಯ್ಯ ಮದ್ದೂರು ಗ್ರಾಮದ ಕಾಂಗ್ರೆಸ್ ಮುಖಂಡ ಪ್ರಸಾದ್ ಹಾಗೂ ಕಾರ್ಯಕರ್ತರು ಹಾಜರಿದ್ದರು

ಕಾನೂನು ವ್ಯವಸ್ಥೆಗೆ ಸಮಸ್ಯೆ: ಕ್ರಮಕ್ಕೆ ಠಾಣೆಗೆ ದೂರು

■ ಕಾಯಕಯೋಗಿ ಸುದ್ದಿ

ಚಾಮರಾಜನಗರ: ಹನೂರು ತಾಲೂಕಿನ ಇಂಡಿಗನತ್ತ ಗ್ರಾಮದ ಮತಗಟ್ಟೆ ಸಂಖ್ಯೆ 146 ರಲ್ಲಿ ಮತದಾನಕ್ಕೆ ಅಡ್ಡಿಪಡಿಸಿ ಕಾನೂನು ವ್ಯವಸ್ಥೆಗೆ ಸಮಸ್ಯೆ ಮಾಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ತಹಸೀಲ್ದಾರ್ ಗುರುಪ್ರಸಾದ್ ಹಾಗೂ ಮತಗಟ್ಟೆ ಪಿಆರ್ಒ ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಗೆ ಪ್ರತ್ಯೇಕ ದೂರು ನೀಡಿದ್ದಾರೆ.

ಚಾಮರಾಜನಗರ ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರದ ಮಲೆ ಮಾದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಡಿಗನತ್ತ

website: www.kayakayogi.com

ಕಾಯಕಯೋಗಿ

KAYAKA YOGI - Regional Daily

ಪುಟ-5 | 27-04-2024

ಹಾಸನ-ರಾಮನಗರ

ಅಜ್ಜಿಯೊಂದಿಗೆ ತೆರಳಿ ಮೊದಲ ಬಾರಿಗೆ ಮತದಾನ-ಯುವಕನ ಸಂತಸ-ಹಬ್ಬದಂತೆ ಆಚರಿಸಲು ಕರೆ



■ ಕಾಯಕಯೋಗಿ ಸುದ್ದಿ

ಮಳವಳ್ಳಿಪ್ರಸಕ್ತ ಲೋಕಸಭೆ ಚುನಾವಣೆಗೆಯುವ ಮತದಾರನೊಬ್ಬ ತನ್ನ ಅಜ್ಜಿಯೊಂದಿಗೆ ತೆರಳಿ ಮೊದಲ ಬಾರಿಗೆ ಮತ ಚಲಾಯಿಸುವ ಮೂಲಕ ತನ್ನ ಹಕ್ಕಿನ ಮಹತ್ವದ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾನೆ.

ಮಾಗನೂರಿನ ಶ್ರೀ ಶಿವರಾತ್ರೀಶ್ವರ ಬಡಾವಣೆಯ ನಿವಾಸಿ , ಮೈಸೂರಿನ ಜೆ.ಸಿ.ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ ಶಿಕ್ಷಣ ಪಡೆಯುತ್ತಿರುವ ಎಂ.ಎಸ್.ಸುಶೀಲ್ ಕುಮಾರ್ ತನ್ನ ಅಜ್ಜಿ ರತ್ನಮ್ಮರವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಅವರು ಮತ ಹಾಕಿದ ನಂತರ ತಾನು ಮತದಾನ ಮಾಡಿ,ಮತದಾನದ ಪ್ರಕ್ರಿಯೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದನು.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಮಗೆ ಎಂತಹ ಸರ್ಕಾರ ಬೇಕು,ಯಾವ ಪಕ್ಷ ಬೇಕು,ಯಾವ ವ್ಯಕ್ತಿಯ ಆಢಳಿತ ಬೇಕು ಎನ್ನುವುದನ್ನು ನಾವೇ ನಿರ್ದರಿಸುವ ಮತದಾನ ಎನ್ನುವುದು ಬಹಳ ಪವಿತ್ರವಾಗಿದೆ.ಇದನ್ನು ದೇಶದ ಪ್ರತಿಯೊಬ್ಬರೂ ಪ್ರಜಾಪ್ರಭುತ್ವದ ಹಬ್ಬದಂತೆ ಮತದಾನ ಮಾಡಿ ಆಚರಿಸುವಂತೆ ಕರೆ ನೀಡಿದ ಅವರು ಇಂತಹ ಅಧಿಕಾರ,ಹಕ್ಕು ,ಸುವರ್ಣ ಅವಕಾಶ ನೀಡಿದ ಸಂವಿಧಾನ ಶಿಲ್ಪಿ ಬಿ ಆರ್ ಅಂಬೇಡ್ಕರ್ ರವರಿಗೆ ನಮನ ಸಲ್ಲಿಸಿದರು.

ಡಾ.ಮಂಜುನಾಥ್ ಸ್ಪರ್ಧೆ ಡಿ.ಕೆ.ಸುರೇಶ್‌ಗೆ ಆಘಾತ





■ ಕಾಯಕಯೋಗಿ ಸುದ್ದಿ

ಕನಕಪುರ: ರಾಜ್ಯದ ಅತ್ಯಂತ ಸೂಕ್ಷ್ಮ ಲೋಕಸಭಾ ಗ್ರಾಮಾಂತರ ಕ್ಷೇತ್ರವಾಗಿರುವ ಬೆಂಗಳೂರು ಲೋಕಸಭಾ ಕ್ಷೇತ್ರವು ಡಿ.ಕೆ. ಸಹೋದರರ ಭದ್ರಕೋಟೆ ಆಗಿದೆ. ಇಲ್ಲಿ ಕಳೆದ ಮೂರು ಬಾರಿ ಪ್ರಬಲ ಪೈಪೋಟಿ ಇಲ್ಲದೇ ಗೆಲುವು ಸಾಧಿಸಿದ್ದ ಸಂಸದ ಡಿ.ಕೆ. ಸುರೇಶ್‌ಗೆ ನಿವೃತ್ತ ವೈದ್ಯ ಡಾ.ಸಿ.ಎನ್. ಮಂಜುನಾಥ್ ದೊಡ್ಡ ಆಘಾತ ಉಂಟು ಮಾಡಿದ್ದಾರೆ.

ಕಾಂಗ್ರೆಸ್ ಭದ್ರಕೋಟೆ ಆಗಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಕಳೆದ 15 ವರ್ಷಗಳಿಂದ ಸತತ ಮೂರು ಬಾರಿ ಡಿ.ಕೆ. ಸುರೇಶ್ ಅವರು ಗೆಲುವು ಸಾಧಿಸಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಇದು ಪ್ರತಿಷ್ಠೆಯ ಕಣವಾಗಿದೆ.ಪ್ರತಿಬಾರಿ ಯಾವುದೇ ಪ್ರಬಲ ಪೈಪೋಟಿ ಇಲ್ಲದೇ ಲೀಲಾಜಾಲವಾಗಿ ಗೆಲ್ಲುತ್ತಿದ್ದ ಡಿ.ಕೆ. ಸಹೋದರರು ಈಗ ನಿವೃತ್ತ ವೈದ್ಯರಾದ ಡಾ.ಸಿ.ಎನ್. ಮಂಜುನಾಥ್ ಬಂದಿದ್ದಾರೆ.

ಜಯದೇವ ಹೃದ್ರೋಗ ಆಸ್ಪತ್ರೆಯ ಮಾಜಿ ನಿರ್ದೇಶಕರೂ ಆಗಿರುವ ಮಂಜುನಾಥ್ ಅವರಿಗೆ ರಾಜಕೀಯದ ಅನುಭವ ಇಲ್ಲದಿದ್ದರೂ ನಮ್ಮ ರಾಜ್ಯದಿಂದ ಪ್ರಧಾನಮಂತ್ರಿ ಆಗಿರುವ ಏಕೈಕ ವ್ಯಕ್ತಿ ಹೆಚ್.ಡಿದೇವೇಗೌಡ ಅವರ ಅಳಿಯನಾಗಿದ್ದಾರೆ. ಮುಖ್ಯವಾಗಿ ರಾಮನಗರದಲ್ಲಿ ರಾಜಕೀಯ ಹುಟ್ಟು ಕಂಡುಕೊಂಡು ರಾಜ್ಯದ ಮುಖ್ಯಮಂತ್ರಿ ಆಗಿರುವ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರ ಭಾವನಾಗಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಪ್ರತಿಷ್ಠೆಯ ಕಣವಾಗಿದೆ. ಈ ಕ್ಷೇತ್ರವನ್ನು ಚುನಾವಣಾ ಆಯೋಗದಿಂದ ಸೂಕ್ಷ್ಮವೆಂದು ಪರಿಗಣಿಸಲಾಗಿದೆ. ಹೀಗಾಗಿ, ಕಳೆದ ಬಾರಿಗಿಂದ ಈ ಬಾರಿ ಡಬಲ್ ಸೆಕ್ಯುರಿಟಿ ಮತ್ತು ಶೇ.100 ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿತ್ತು.



ಕನಕಪುರ: ಬೆಂಗಳೂರು ಗ್ರಾಮಾಂತರ ಲೋಕಸಭಾ ಚುನಾವಣೆಗೆ ಪ್ರಯುಕ್ತ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗು ಸಂಸದ ಡಿ.ಕೆ.ಸುರೇಶ್ ಸಹೋದರರು ತಮ್ಮ ಹುಟ್ಟೂರಾದ ಕನಕಪುರ ತಾಲ್ಲೂಕಿನ ದೊಡ್ಡಾಲಹಳ್ಳಿ ಮತಗಟ್ಟೆಗೆ ಆಗಮಿಸಿ ತಮ್ಮ ಮತದಾನ ಮಾಡಿದರು.



ಕನಕಪುರ: ಬೆಂಗಳೂರು ಗ್ರಾಮಾಂತರ ಲೋಕಸಭಾ ಚುನಾವಣೆಗೆ ಇಂದು ನಡೆದ ಮತದಾನದಲ್ಲಿ ಕನಕಪುರ ತಾಲೂಕು ಜೆಡಿಎಸ್ ಅಧ್ಯಕ್ಷ ಬಿ.ನಾಗರಾಜು ಕುಟುಂಬ ಸಮೇತ ನಗರದ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಿದರು.

ದೊಡ್ಡಿಂದುವಾಡಿ ಗ್ರಾಮದಲ್ಲಿ ನರೇಂದ್ರ, ನಿಶಾಂತ್ ಮತ ಚಲಾವಣೆ

■ ಕಾಯಕಯೋಗಿ ಸುದ್ದಿ

ಹನೂರು : ಚಾಮರಾಜನಗರ ಲೋಕಸಭಾ ಚುನಾವಣೆ ಹಿನ್ನೆಲೆ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೊಡ್ಡಿಂದುವಾಡಿ ಗ್ರಾಮದಲ್ಲಿ ಮಾಜಿ ಶಾಸಕ ಆರ್ ನರೇಂದ್ರ, ಹಾಗೂ ಹನೂರು ಪಟ್ಟಣದಲ್ಲಿ ಬಿಜೆಪಿ ಮುಖಂಡ ನಿಶಾಂತ್ ರವರು ತಮ್ಮ ಮತ ಚಲಾಯಿಸಿದರು.

ಲೋಕಸಭಾ ಚುನಾವಣೆ ಹಿನ್ನೆಲೆ ಮೊದಲ ಹಂತದಲ್ಲಿ ನಡೆಯುತ್ತಿರುವ 14 ಕ್ಷೇತ್ರಗಳ ಪೈಕಿ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹನೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಆರ್ ನರೇಂದ್ರ ಅವರ ಸ್ವಗ್ರಾಮ ದೊಡ್ಡಿಂದುವಾಡಿ ಗ್ರಾಮದ ಮತಗಟ್ಟೆ ಸಂಖ್ಯೆ 40 ರಲ್ಲಿ ಪತ್ನಿ ಆಶಾ ಪುತ್ರಿಯರಾದ ನಿಖಿತಾ, ನಮಿತಾ, ಪುತ್ರ ನವನೀತ್ ಸೇರಿದಂತೆ ಕುಟುಂಬಸ್ಥರ ಜೊತೆ ತಮ್ಮ ಮತ ಚಲಾಯಿಸಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಬಿಜೆಪಿ ಮುಖಂಡ ನಿಶಾಂತ್ ರವರು ಹನೂರು ಪಟ್ಟಣದ ಮತಗಟ್ಟೆ ಸಂಖ್ಯೆ 104ರಲ್ಲಿ ಸರತಿ ಸಾಲಿನಲ್ಲಿ ನಿಂತು ತಮ್ಮ ಮತ ಚಲಾಯಿಸಿದರು.

ಶುಕ್ರವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಶಾಂತಿಯುತ ಮತದಾನ ನಡೆಯಿತು.





ಮತದಾರರಲ್ಲಿ ಇಲ್ಲದ ಉತ್ಸಾಹ: ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುವ ವಿಧಾನಸಭಾ, ಜಿಪಂ, ತಾಪಂ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ ಚುನಾವಣಾ ಚುನಾವಣೆಗಳಲ್ಲಿ ಮೂರು ಪಕ್ಷದ ಅಭ್ಯರ್ಥಿಗಳು ಪ್ರತಿ ಮತದಾರರನ್ನು ಭೇಟಿಯಾಗಿ ತಮಗೆ ಮತ ನೀಡುವಂತೆ ಆಮಿಷ, ಭರವಸೆಗಳನ್ನು ನೀಡಿ ಮತದಾರರನ್ನು ಮತ ಕೇಳುತ್ತಾರೆ. ಆದರೆ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಪಕ್ಷದ ಅಭ್ಯರ್ಥಿಗಳು ಪ್ರತಿ ಮತದಾರರನ್ನು ಸಂಪರ್ಕಿಸಲು ಸಾಧ್ಯವಿಲ್ಲದೆ ಇರುವುದು ಹಾಗೂ ಮತದಾರರಿಗೆ ಯಾವುದೇ ಹಣ ನೀಡದೆ ಇರುವುದರಿಂದ ಮತದಾರರು ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಲು ಉತ್ಸಾಹ ತೋರಲಿಲ್ಲ.

ಪಟ್ಟಣಕ್ಕೆ ಸಚಿವರ ಭೇಟಿ: ಹನೂರು ಪಟ್ಟಣಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನಿಲ್ ಬೋಸ್ ರವರ ತಂದೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್ ಸಿ ಮಹದೇವಪ್ಪ ರವರು ಮಾಜಿ ಶಾಸಕ ಆರ್ ನರೇಂದ್ರ ರವರ ಜೊತೆ ಭೇಟಿ ನೀಡಿ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದಿರುವ ಮತದಾನದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಂಡು, ಕಾರ್ಯಕರ್ತರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕರ್ತರನ್ನು ಭೇಟಿ ಮಾಡಿದ ಬಾಲರಾಜು: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಾಲರಾಜು ರವರು ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಆಗಮಿಸಿ ಕಾರ್ಯಕರ್ತರ ಜೊತೆ ಕುಶಲೋಪಚಾರಿ ನಡೆಸಿ ಹೆಚ್ಚು ಮತದಾನ ವಾಗುವಂತೆ ನೋಡಿಕೊಳ್ಳಿ ಎಂದು ಚರ್ಚೆ ನಡೆಸಿ ಕೊಳ್ಳೇಗಾಲದತ್ತ ತೆರಳಿದರು. ಈ ವೇಳೆ ಬಿಜೆಪಿ ಮುಖಂಡ ನಿಶಾಂತ್ ಹಾಗೂ ಇನ್ನಿತರರು ಚುನಾವಣೆ ಹಾಗೂ ಹನೂರು ಪಟ್ಟಣದ ಬಗ್ಗೆ ಚರ್ಚೆ ನಡೆಸಿದರು.

ಮತಗಟ್ಟೆಗಳಿಗೆ ಜಿಲ್ಲಾಧಿಕಾರಿ ಭೇಟಿ, ಪರಿಶೀಲನೆ



ಮಂಡ್ಯ : ಜಿಲ್ಲಾಧಿಕಾರಿ ಡಾ.ಕುಮಾರ ಅವರು ಮಂಡ್ಯ ತಾಲ್ಲೂಕು ಕೆರಗೋಡು, ಮರಲಿಂಗನದೊಡ್ಡಿ ಹಾಗೂ ಎಸ್.ಐ ಕೋಡಿಹಳ್ಳಿ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್ ಯತೀಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್ ಅವರು ಉಪಸ್ಥಿತರಿದ್ದರು.

ಚುನಾವಣಾ ಪರ್ವ, ದೇಶದ ಗರ್ವ ಎಂಬ ಸಂದೇಶ ಮುದ್ರಿತ ರೇಷ್ಮೆ ಸೀರೆಯಲ್ಲಿ ಮಿಂಚಿದ ಅಧಿಕಾರಿಗಳು



■ ಕಾಯಕಯೋಗಿ ಸುದ್ದಿ

ಚಾಮರಾಜನಗರ: ಚುನಾವಣಾ ಪರ್ವ, ದೇಶದ ಗರ್ವ ಎಂಬ ಸಂದೇಶ ಮುದ್ರಿತ ರೇಷ್ಮೆ ಸೀರೆಯಲ್ಲಿ ಜಿಲ್ಲಾಧಿಕಾರಿ, ಜಿಪಂ ಉಪಕಾರ್ಯದರ್ಶಿ ಸೇರಿದಂತೆ ಇತರೆ ಅಧಿಕಾರಿಗಳು ಮಿಂಚಿದರು.

ಚುನಾವಣೆಯಲ್ಲಿ ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ರೇಷ್ಮೆ ಸೀರೆಗಳಲ್ಲಿ ಜಾಗೃತಿ ಸಂದೇಶವನ್ನು ಮುದ್ರಿಸಲಾಗಿದ್ದು, ಈ ಸೀರೆಗಳನ್ನು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಸ್ವೀಪ್ ನೋಡೆಲ್ ಅಧಿಕಾರಿ ಲಕ್ಷ್ಮಿ ಚಾಮರಾಜನಗರ ಸಹಾಯಕ ಚುನಾವಣಾಧಿಕಾರಿ ಸವಿತಾ ಸೇರಿದಂತೆ ಇತರೆ ಅಧಿಕಾರಿಗಳು ಧರಿಸಿ ಮಿಂಚಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ನಗರದ ಪಿಡಬ್ಲೂಡಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಗೆ ರೇಷ್ಮೆ ಸೀರೆ ಧರಿಸಿ ಆಗಮಿಸಿ ಮತ ಚಲಾಯಿಸಿದರು. ಇದಕ್ಕೂ ಮುನ್ನ ಮತದಾರರ ಪಟ್ಟಿಯಲ್ಲಿ ತಾವೇ ಖುದ್ದು ಹೆಸರು ಹುಡುಕಿದರು. ಬಳಿಕ ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡಿದರು. ಜಿಲ್ಲಾಧಿಕಾರಿಗೆ ಲಕ್ಷ್ಮಿ?? ಸವಿತಾ ಸಾಥ್ ನೀಡಿದರು. ಮೂವರು ಅಧಿಕಾರಿಗಳು ವೋಟರ್ ಸ್ಲಿಪ್ ಪಾಯಿಂಟ್‌ನಲ್ಲಿ ನಿಂತು ಫೋಟೊ ತೆಗೆಸಿಕೊಂಡರು.

ಕೊಳ್ಳೇಗಾಲದ ನೇಕಾರ ಕೃಷ್ಣಮೂರ್ತಿ ಅವರು 10 ಸೀರೆಗಳನ್ನು ನೇಯ್ದಿದ್ದು, ಅದನ್ನು ನಾವು ಖರೀದಿಸಿದ್ದೇವೆ. ಮತದಾನದ ಅರಿವು ಮೂಡಿಸಲು ಸ್ವೀಪ್ ಸಮಿತಿ ಮಾಡಿರುವ ಪ್ರಯತ್ನ ಇದು' ಎಂದು ಸ್ವೀಪ್ ಸಮಿತಿ ನೋಡೆಲ್ ಅಧಿಕಾರಿ ಲಕ್ಷ್ಮಿ ತಿಳಿಸಿದರು.

ಗಮನ ಸೆಳೆದ ಮತಗಟ್ಟೆಗಳು : ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಜಿಲ್ಲೆಯ ವಿವಿಧೆಡೆ ಹಲವು ವಿಶೇಷ ಮತಗಟ್ಟೆಗಳನ್ನು ತೆರೆಯಲಾಗಿದ್ದು, ಈ ಮತಗಟ್ಟೆಗಳು ಮತದಾರರ ಗಮನ ಸೆಳೆದವು.

ಸಖಿ ಸೌರಭ, ಸಾಂಪ್ರದಾಯಿಕ, ಯುವ ಸೌರಭ, ವಿಶೇಷಚೇತನರು, ಅನ್ನದಾನ, ಹಸಿರು ಮತಗಟ್ಟೆಗಳು ಎಲ್ಲರ ಗಮನ ಸೆಳೆದವು. ಚಾಮರಾಜನಗರದ ರಾಮಸಮುದ್ರದ ಸರ್ಕಾರಿ ಶಾಲೆಯಲ್ಲಿ ಸ್ಥಾಪಿಸಲಾಗಿರುವ ಸಾಂಪ್ರದಾಯಿಕ ಮತಗಟ್ಟೆ ಗಮನಸೆಳೆಯುತ್ತಿದೆ. ಜಾನಪದ ಕಲಾವಿದರು ಬಳಸುವ ಸಂಗೀತ ಪರಿಕರಗಳು, ಹಳೆ ಕಾಲದಲ್ಲಿ ಬಳಸುತ್ತಿದ್ದ ವಸ್ತುಗಳನ್ನು ಮತಗಟ್ಟೆಗಳಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ

ಮತದಾನ ಮಾಡಿದ ಅಧಿಕಾರಿಗಳು




ಮಂಡ್ಯ : ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಏ.26 ರಂದು ಮತದಾನದ ಹಬ್ಬ. ಹಿರಿಯ ನಾಗರೀಕರು, ವಿಕಲಚೇತನರು, ಸಾರ್ವಜನಿಕರು ಅಧಿಕಾರಿಗಳು ಉತ್ಸಾಹದಿಂದ ಮತಗಟ್ಟೆಗೆ ಆಗಮಿಸಿ ಮತದಾನ ಮಾಡಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಅವರು ಇಂದು ಮಂಡ್ಯ ನಗರದ ಬನ್ನೂರು ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮತದಾನ ಮಾಡಿ ಪ್ರಜಾಪ್ರಭುತ್ವದ ಹಬ್ಬದ ಮತದಾನ ಮಾಡಿ ದೇಶದ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು ಎಂದರು.

ನಂತರ ಮತಗಟ್ಟೆಯಲ್ಲಿದ್ದ ಹಿರಿಯ ವಯಸ್ಕರ ಮತದಾರರಿಂದ ಮತಗಟ್ಟೆಯಲ್ಲಿ ಮಾಡಿರುವ ವ್ಯವಸ್ಥೆ, ಮತಗಟ್ಟೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಊಟದ ವ್ಯವಸ್ಥೆಯ ಬಗ್ಗೆ ಪರಿಶೀಲಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಉಪಸ್ಥಿತರಿದ್ದರು.



ಅಧಿಕ ಮತಗಳಿಂದ ಜಯಗಳಿಸುವುದರಲ್ಲಿ ಸಂಶಯವಿಲ್ಲ: ಸ್ಟಾರ್ ಚಂದ್ರು

■ ಕಾಯಕಯೋಗಿ ಸುದ್ದಿ

ಮದ್ದೂರು : ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ನನಗೆ ಉತ್ತಮ ಸ್ಪಂದನೆಯಿದ್ದು ಚುನಾವಣೆಯಲ್ಲಿ ಅಧಿಕ ಅಂತರಗಳ ಮತಗಳಿಂದ ಜಯಗಳಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಪುರಾಣ ಪ್ರಸಿದ್ಧ ಹೊಳೆ ಆಂಜನೇಯ ಸ್ವಾಮಿ ದೇವಾಲಯಕ್ಕೆ ಶುಕ್ರವಾರ ಭೇಟಿ ನೀಡಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಪಟ್ಟಣದಲ್ಲಿ ನಿರ್ಮಿಸಿರುವ ಸಖಿ ವಿಶೇಷ ಮತಗಟ್ಟೆ ಹಾಗೂ ವಿಶೇಷ ಚೇತನರ ಮತಗಟ್ಟೆಗೆ ಭೇಟಿ ನೀಡಿ ಮತದಾರರಿಂದ ಮತಯಾಚಿಸಿ ನಂತರ ಅವರು ಮಾತನಾಡಿದರು.

ಏರಡು ತಿಂಗಳಿಂದ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ಕೈಗೊಂಡಿದ್ದು ಆ ಸಂದರ್ಭದಲ್ಲಿ ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಉತ್ತಮ ಪ್ರತಿಕ್ರಿಯೆ ಬಂದಿದ್ದು ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ನನಗೆ ಅತ್ಯಧಿಕ ಮತಗಳು ಲಭಿಸುವ ವಿಶ್ವಾಸವಿದೆ ಎಂದರು.

ನನಗೆ ಕಾಂಗ್ರೆಸ್ ಸರ್ಕಾರ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳು ಸರ್ಕಾರದ ಜನಪರ ಯೋಜನೆಗಳು ಹಾಗೂ ಜಿಲ್ಲೆಯ ಶಾಸಕರ ಸಹಕಾರದಿಂದ ಈ ಬಾರಿಯ ಚುನಾವಣೆಯಲ್ಲಿ ಜಯಗಳಿಸಲು ಉತ್ತಮ ಅವಕಾಶವಿದೆ ಎಂದರು.

ಶಾಸಕ ಕೆ.ಎಂ.ಉದಯ್, ಏನುತ ಕೆ.ಎಂ.ಉದಯ್, ಪುರಸಭಾ ಮಾಜಿ ಅಧ್ಯಕ್ಷ ಎಂ.ಪಿ.ಅಮರ್ ಬಾಬು, ಮುಖಂಡ ಸಂತೋಷ್ ಸೇರಿದಂತೆ ಇತರರು ಇದ್ದರು.



ಬೆಂಗಳೂರಿನ ಪದ್ಮನಾಭ ನಗರದ ಸಹಕಾರಿ ವಿದ್ಯಾ ಕೇಂದ್ರದ ಮತಗಟ್ಟೆಯಲ್ಲಿ ಚಲನಚಿತ್ರ ವೇಷಕ ಕಲಾವಿದರ ಸಂಘದ ಕಾರ್ಯಕಾರಿ ಸದಸ್ಯ, ಪತ್ರಕರ್ತ, ಕರ್ನಾಟಕ ವರ್ಕಿಂಗ್ ಡಿಜಿಟಲ್ ಆಂಡ್ ಸೋಶಿಯಲ್ ಮಿಡಿಯಾ ಪ್ರಧಾನ ಕಾರ್ಯದರ್ಶಿ ಮತ್ತು ವೀರಶೈವ ಲಿಂಗಾಯತ ಸಂಘಟನೆಯ ಉಪಾಧ್ಯಕ್ಷ ನಟರಾಜ್ ಹಂಚಾಗಿಮಠ ಇಂದು ನಡೆದ ಮತ ಹಬ್ಬ ಲೋಕಸಭಾ ಚುನಾವಣೆಯಲ್ಲಿ ಕುಟುಂಬ ಸಮೇತರಾಗಿ ಆಗಮಿಸಿ ಮತ ಚಲಾಯಿಸಿದರು

website: www.kayakayogi.com

ಕಾಯಕಯೋಗಿ

KAYAKA YOGI - Regional Daily

ಪುಟ–6 | 27–04–2024

ಬೆಂಗಳೂರು



ವಿಜಯಪುರ ಪಟ್ಟಣದಲ್ಲಿ ದೇವನಹಳ್ಳಿ ರಸ್ತೆಯ ಗಿರಿಜಾ ಶಂಕರ ಕಲ್ಯಾಣ ಮಂಟಪದಲ್ಲಿ ಶುಕ್ರವಾರದಂದು ವಿವಾಹವಾದ ಶ್ರೀನಿವಾಸ * ನಾಗಮಣಿ ದಂಪತಿಗಳ ಮಗಳಾದ ತೇಜಸ್ವಿನಿ ಶಶಾಂಕ್ ರವರು ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ ಮತದಾನ ಮಾಡಿದರು.



ವಿಜಯಪುರ ಪಟ್ಟಣದ ದುರ್ಗಾ ತಾಯಿ ದೇವಾಲಯದ ಬಳಿ ಮಾದರಿ ಮತಪತ್ರ ಯಂತ್ರ ತೋರಿಸಿ ಮತಯಾಚನೆ ಮಾಡುತ್ತಿರುವ ಬಿಜೆಪಿ ಕಾರ್ಯಕರ್ತರು.

ಮಂದಗತಿಯಿಂದ ಚುರುಕುಗೊಂಡ ಮತದಾನ

ಹೋಬಳಿಯಲ್ಲಿ ಶೇ 75ರಿಂದ 85ರಷ್ಟು ಮತದಾನ

■ ಕಾಯಕಯೋಗಿ ಸುದ್ದಿ

ವಿಜಯಪುರ: ಪಟ್ಟಣದಲ್ಲಿ ಬೆಳಿಗಿನ ವೇಳೆ 7:30ರ ಹೊತ್ತಿಗೆ ಮತದಾನ ಚುರುಕುಕೊಂಡರೆ ಹೋಬಳಿಯ ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ಕಡೆ 8:30 9:00 ವರೆಗೆ ಕೆವಲ ಬೆರಳೆಣಿಕೆ ಮತದಾನ ನಡೆದಿದ್ದು ಮತದಾರರು ಮತಗಟ್ಟೆಗೆ ಬಂದಿರಲಿಲ್ಲ. ಆದರೆ ಮಧ್ಯಾಹ್ನದ ನಂತರ ಗ್ರಾಮೀಣ ಪ್ರದೇಶದಲ್ಲಿ ಮತದಾನ ಚುರುಕುಕೊಂಡಿದ್ದು ಕೆಲವಷ್ಟು ಕಡೆ 85 ರಿಂದ 90 ರಷ್ಟು ಮತದಾನ ನಡೆದಿದ್ದು ಕಂಡುಬಂದಿತು.

ಹೋಬಳಿಯಾದ್ಯಂತ ಸಂಪೂರ್ಣ ಬಂದೋಬಸ್ತ್ ಏರ್ಪಡಿಸಲಾಗಿದ್ದು ಯಾವುದೇ ಅಹಿತಕರ ಘಟನೆಗಳು ಕಂಡುಬರಲಿಲ್ಲ.



ಧರ್ಮಪುರದ ಒಂದು ಬೂತ್ನಲ್ಲಿ ಬೇರೆಡೆ ಮತದಾನ ಮಾಡಿ ಬಂದವರು ಇಲ್ಲಿಯೂ ಸಹ ಹೆಸರು ಮತಪಟ್ಟಿಯಲ್ಲಿ ಇದ್ದ ಕಾರಣ ಮತದಾನ ಮಾಡಲು ಬಂದ ಪ್ರಸಂಗ ಕಂಡುಬಂದಿತು.

ಹಾರೋಹಳ್ಳಿಯ ಮತಗಟ್ಟೆಯೊಂದರಲ್ಲಿ 102 ವರ್ಷ ವಯಸ್ಸಿನ ನರಸಮ್ಮ ಎಂಬ ವೃದ್ಧೆ ತಮ್ಮ ಮಗ ಮುನಿಯಪ್ಪ ರವರೊಂದಿಗೆ ಮತದಾನ ಮಾಡಿದ್ದು ವಿಶೇಷವಾಗಿತ್ತು. ವೃದ್ಧರು ಹಾಗೂ ಅಂಗವಿಕಲರುಗಳಿಗೆ ಅವರುಗಳ ಮನೆ ಬಾಗಿಲಲ್ಲಿಯೇ ಮತದಾನ ಮಾಡುವ ವ್ಯವಸ್ಥೆ ಕಲ್ಪಿಸಿದ್ದರು ಸಹ ಬಹಳಷ್ಟು ಮಂದಿ ಮತಗಟ್ಟೆಗಳಿಗೆ ಬಂದು ಮತದಾನ ಮಾಡುತ್ತಿರುವುದು ಕಂಡುಬಂದಿತು.

ಮೈಸೂರಲ್ಲಿ ಕಾವೇರಿದ ಮತದಾನ

ಹಲವು ಗಣ್ಯರು ಸೇರಿ ಅನೇಕ ವಿಶೇಷತೆಗಳಿಗೆ ಮತದಾನ ಸಾಕ್ಷಿ

■ ಕಾಯಕಯೋಗಿ ಸುದ್ದಿ

ಮೈಸೂರು: ಕಾವೇರಿದ ಲೋಕಸಭಾ ಚುನಾವಣೆಗೆ ಕೊನೆಗೂ ಮತದಾರರು ಮತಮುದ್ರೆ ಒತ್ತುವ ಮೂಲಕ ಮೈಸೂರು–ಕೊಡಗು ಅಭ್ಯರ್ಥಿಗಳ ಭವಿಷ್ಯ ಬರೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಒಟ್ಟು 2202 ಮತಗಟ್ಟೆಗಳಲ್ಲಿಯೂ ಸೂಸೂತ್ರವಾಗಿ ಮತ ಪ್ರಕ್ರಿಯೆ ಆರಂಭವಾಯಿತು. 9809 ಮತಗಟ್ಟೆ ಸಿಬ್ಬಂದಿ, 435 ಕೆಎಸ್ ಆರ್ ಟಿಸಿ ಬಸ್ ಹಾಗೂ 79 ಮಿನಿ ಬಸ್ ಗಳು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಚುನಾವಣಾ ಭದ್ರತೆಯಲ್ಲಿ ಸ್ಟ್ರಾಂಗ್ ರೂಮ್ ಸೇರಿದವು.

2019 ರಲ್ಲಿ ಶೇ.70 ರಷ್ಟು, 2023 ರಲ್ಲಿ ಶೇ.75 ರಷ್ಟು ಮತದಾನ ಪ್ರಕ್ರಿಯೆ ನಡೆದಿತ್ತು. ಈ ಬಾರಿ ಶೇ. ರಷ್ಟು ಮತದಾನ ಪ್ರಕ್ರಿಯೆಗಳು ನಡೆದವು. ಇದೇ ವೇಳೆ ಮಹಿಳಾ ಮತದಾರರು ಹೆಚ್ಚಿರುವ 55 ಮತಗಟ್ಟೆಗಳನ್ನು ಪಿಕ್ ಮತಗಟ್ಟೆಗಳಾಗಿ ಪರಿವರ್ತಿಸಿ ಪಿಂಕ್ ಕಲರ್ ನಲ್ಲಿ ಶೃಂಗಾರ ಮಾಡಲಾಗಿತ್ತು.

ಗಣ್ಯರಿಂದ ಮತದಾನ: ಮೈಸೂರಿನ ಸುತ್ತೂರು ಮಠದ ಸರ್ಕಾರಿ ಶಾಲೆಯಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ ಹಾಕಿದರು. ನಗರದ ಊಟ ರಸ್ತೆಯ ಜೆಎಸ್ ಎಸ್ ಬೂತ್ ನಲ್ಲಿ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಕಿರಿಯ ಶ್ರೀಗಳಾದ ವಿಜಯೋತ್ತಾನಂದ ತೀರ್ಥ ಸ್ವಾಮೀಜಿ, ಜಯನಗರದ ಸರ್ಕಾರಿ ಶಾಲೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಕುಟುಂಬ ಸಮೇತರಾಗಿ ಮತ ಚಲಾಯಿಸಿದರು. ಬಿಜೆಪಿ ಶಾಸಕ ಟಿ.ಎಸ್.ಶ್ರೀವತ್ಸ ಸಂಸ್ಕೃತ ಪಾಠಶಾಲೆಯಲ್ಲಿ ಬೂತ್ ನಂ.51ರಲ್ಲಿ ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡಿದರು. ಜೆಎಸ್ ಎಸ್ ಪ್ರೌಢ ಶಾಲೆಯಲ್ಲಿ ಬಿಜೆಪಿ ಮುಖಂಡ ಮಾಳವಿಕ ಅವಿನಾಶ್ ಮತದಾನ ಮಾಡಿದರು.

ಶಾಸಕ ಜಿ.ಟಿ.ದೇವೇಗೌಡ ಹುಟ್ಟೂರು ಗುಂಗ್ರಾಲ್ ಛತ್ರದ ಸರ್ಕಾರಿ ಶಾಲೆಗೆ ಪತ್ನಿ ಲಲಿತ ಜಿ.ಟಿ.ದೇವೇಗೌಡರ ಜತೆಗೂಡಿ ತಮ್ಮ ಹಕ್ಕು ಚಲಾಯಿಸಿದರು. ಇನ್ನೂ ಮಾಜಿ ಸಚಿವ ಎಸ್.ಎ.ರಾಮದಾಸ್ ಸೆಂಟ್ ಜೋಸೆಫ್ ಶಾಲೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು. ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮೈಸೂರಿನ 232 ನೇ ಮತಗಟ್ಟೆಯಲ್ಲಿ ತಮ್ಮ ಮತವನ್ನು ಚಲಾಯಿಸಿದರು.

ಇನ್ನೂ ಮತದಾನದ ಸ್ಟಾರ್ ಪ್ರಚಾರಕರಾದ ಕ್ರಿಕೆಟಿಗ ಅನಿಲ್ ಕುಂಬ್ಳೆ, ಮಂಗಳಮುಖಿ ಪ್ರಣತಿ ಪ್ರಕಾಶ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

ಹಸಮಣೆಯಿಂದ ಮತ ಕೇಂದ್ರಕ್ಕೆ: ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಬಿರುಸಿನ ಮತದಾನಕ್ಕೆ ಶ್ರೀನಿವಾಸ್ ಹಾಗೂ ಅಕ್ಷತ ದಂಪತಿಗಳು ಮದುವೆಯಾಗಿ ಮದುವೆ ಮಂಟಪದ ಧರಿಸಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಹೂಟಗಳ್ಳಿ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿ ಗಮನ ಸೆಳೆದರು.

ಮತದಾನ ಬಳಿಕ ವೃದ್ಧೆ ಸಾವು: ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಳ್ಳಿ ಗ್ರಾಮದ 90 ರ ವಯಸ್ಸಿನ ವೃದ್ಧೆ ಪುಟ್ಟಮ್ಮ ಮತದಾನ ಮಾಡಿ ಬಳಿಕ ಮನೆಗೆ ತೆರಳಿ ಸಾವನ್ನಪ್ಪಿದರು.

ಹುಟ್ಟೂರಲ್ಲಿ ಸಿದ್ದು ಖಿದರ್

ಮೈಸೂರು: ಕಾಲ್ತೂಕಿನ ವರುಣ ಹೋಬಳಿಯ ಸಿದ್ದರಾಮನಹುಂಡಿ ಗ್ರಾಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಜತೆಗೂಡಿ ಮತದಾನ ಮಾಡಿದರು. ಈ ವೇಳೆ ಅಭಿಮಾನಿಯೂ ಗೋವೊಂದನ್ನು ಸಿಎಂಗೆ ತೋರಿ ಖುಷಿ ಪಟ್ಟರು. ಬಹುತೇಕ ಕ್ಷೇತ್ರಗಳ ಗೆಲುವಿನಲ್ಲಿ ಸಂಭ್ರಮಿಸಿದರು.

ಗೆಲುವು ವಿಶ್ವಾಸವಿದೆ: ಯದುವೀರ

ಮೈಸೂರು: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತದಾನಕ್ಕೂ ಮುನ್ನ ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸಿದರು.

ಬಳಿಕ ಕುಟುಂಬ ಸಮೇತರಾಗಿ ಶಂಕರಮಠ ರಸ್ತೆಯ ಶ್ರೀಕಾಂತ ಮಹಿಳಾ ವಿದ್ಯಾಲಯದಲ್ಲಿ ತಾಯಿ ಪ್ರಮೋದದೇವಿ ಒಡೆಯರ್, ಪತ್ನಿ ತ್ರಿಶಿಕಾ ಕುಮಾರಿ ಒಡೆಯರ್ ಅವರೊಂದಿಗೆ ಬಂದು ಮತದಾನ ಮಾಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಭ್ಯರ್ಥಿಯಾಗಿ ಮತದಾನ ಮಾಡಿದ್ದೇನೆ. ಅದಕ್ಕೆ ಖುಷಿಯಾಗುತ್ತಿದೆ. ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ನಮ್ಮೆಲ್ಲರ ಹಕ್ಕು. ಈ ಬಾರಿ ಬಿಜೆಪಿ ಹೆಚ್ಚಿನ ಮತಗಳಿಂದ ಗೆಲ್ಲಲಿದೆ. ಪ್ರಾರಂಭದ ದಿನದಂದಲೂ ಹೇಳುತ್ತಿದ್ದೇನೆ ಗೆಲ್ಲುವ ವಿಶ್ವಾಸವಿದೆ ಎಂದು ಹೇಳಿದರು. ಬಳಿಕ ಮಂಚೇಗೌಡನ ಕೊಪ್ಪಲು, ಪಡುವಾರಹಳ್ಳಿ ಸೇರಿ ಹಲವೆಡೆ ಮತದಾನದ ಪ್ರಕ್ರಿಯೆ ಪರಿಶೀಲಿಸಿದರು.

ಅವಕಾಶ ಸಿಗುವುದು ಖಚಿತ: ಎಂ.ಲಕ್ಷ್ಮಣ್

ಮೈಸೂರು: ಕಳೆದೆರೆಡು ಬಾರಿ ಮೈಸೂರು–ಕೊಡಗು ಲೋಕಸಭಾ ಜನತೆ ಬಿಜೆಪಿ ಕೈ ಹಿಡಿದಿದ್ದು, ಈ ಬಾರಿ ಕಾಂಗ್ರೆಸ್ ಕೈ ಹಿಡಿಯುವ ಮೂಲಕ ನನಗೊಂದು ಅವಕಾಶ ಸಿಗುವುದು ಖಚಿತವಾಗಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಹೇಳಿದರು.

ಯಾದವಗಿರಿ ಆಕಾಶವಾಣಿ ವೃತ್ತದ ಸಮೀಪದ ನಗರದ ಸುನಂದ ಪ್ಯಾಲೆ ಶಾಲೆಯಲ್ಲಿ ಕುಟುಂಬ ಸಮೇತರಾಗಿ ಬಂದು ಮತದಾನ ಮಾಡಿದರು. ಈ ವೇಳೆ ಮಾತನಾಡಿದ ಅವರು, ಕಳೆದೆರಡು ಬಾರಿ ಕ್ಷೇತ್ರದಲ್ಲಿ ಹಲವು ಕಾರಣಗಳಿಂದಾಗಿ ಜನತೆ ಬಿಜೆಪಿಗೆ ಮತ ಹಾಕಿದ್ದರು. ಆದರೆ, ಈ ಬಾರಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಕೈ ಬಲ ಪಡಿಸಲು ಕಾಂಗ್ರೆಸ್ ಗೆ ಮತ ಹಾಕುವ ವಿಶ್ವಾಸವಿದೆ. ನೂರಕ್ಕೆ ನೂರರಷ್ಟು ಗೆಲುವು ಖಚಿತ ಎಂದು ಮತದಾನ ಪ್ರಕ್ರಿಯೆಯಲ್ಲಿ ಕಂಡು ಬಂದಿದೆ ಎಂದು ಹೇಳಿದರು. ಬಳಿಕ ವಿವಿಧ ಮತಗಟ್ಟೆಗಳಿಗೆ ತೆರಳಿ ಪರಿಶೀಲನೆ ನಡೆಸಿ ಮತಯಾಚಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಮಾದರಿ ಮತದಾನ

ಗಮನ ಸೆಳೆದ ಮತಗಟ್ಟೆಗಳು:

ಸಖೀ ಮತಗಟ್ಟೆ, ಸಾಂಸ್ಕೃತಿಕ ಮತಗಟ್ಟೆ, ಅಂಗವಿಕಲರಿಗೆ ಪ್ರತ್ಯೇಕ ಮತಗಟ್ಟೆ, ಯುವ ಮತಗಟ್ಟೆಗಳನ್ನು ತೆರೆದು ಮತದಾರರನ್ನು ಆಕರ್ಷಿಸುವಲ್ಲಿ ಚುನಾವಣಾ ಆಯೋಗ ಯಶಸ್ವಿಯಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳ ಕೆಲವೆಡೆಗಳಲ್ಲಿ ಮತಗಟ್ಟೆಗಳನ್ನು ತಳಿರುತೋರಣಗಳಿಂದ ಸಿಂಗರಿಸಿದ್ದು ಮತದಾರರ ಆಕರ್ಷಣೆಗೆ ಒಳಗಾಗಿತ್ತು. ಮತ ಕೇಂದ್ರದ ಗೋಡೆಗಳ ಮೇಲೆ ಚಿತ್ತಾರ ಮೂಡಿಸಿದ್ದು ಮತ್ತಷ್ಟು ಗಮನ ಸೆಳೆಯಿತು.

ಸಖಿ ಮತಗಟ್ಟೆಯಲ್ಲಿ ಕಾರ್ಯನಿರ್ವಹಿಸುವ ಎಲ್ಲರೂ ಮಹಿಳೆಯರೇ ಆಗಿದ್ದರೆ, ಅಷ್ಟೇ ಉತ್ಸಾಹದಿಂದ ಮಹಿಳೆಯರು ಮತದಾನ ಮಾಡುತ್ತಿದ್ದುದು ಕಂಡುಬಂತು. ಇನ್ನು ಯಂಗ್ ಮತ ಕೇಂದ್ರದಲ್ಲಿ ಯುವಜನರೇ ಸಿಬ್ಬಂದಿಗಳಾಗಿ ಕೆಲಸ ನಿರ್ವಹಿಸಿದರು. ಇಲ್ಲೂ ಸಹ ಯುವಜನರು. ಹೊಸ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮತದಾನ ಮಾಡುತ್ತಿದ್ದುದ್ದು ಕಂಡುಬಂತು.

ಕುದರೆ ಏರಿ ಬಂದ ಮತದಾನ ದೊರೆ..

ನಮ್ಮ ಹಕ್ಕನ್ನು ಚಲಾಯಿಸಬೇಕು. ಆ ಮೂಲಕ ಉತ್ತಮ ಸರ್ಕಾರ ರಚನೆಗೆ ಕೈ ಜೋಡಿಸಬೇಕು ಎನ್ನುವ ಅವರು ಮತದಾನ ಜಾಗೃತಿ ಮೂಡಿಸುವಲ್ಲಿ ವಿಶೇಷ ಆಸಕ್ತಿ ವಹಿಸಿದ್ದರು. ಜೊತೆಗೆ ತಮ್ಮ ಮಾಲೀಕತ್ವದ ಕೌಸ್ತುಭ ಹೋಟೆಲ್ ನಲ್ಲಿ ಓಟು ಮಾಡಿ ಬಂದು ಸಮೋಸ ಮತ್ತು ಟೀ ಫ್ರೀಯಾಗಿ ಪಡೆಯಿರಿ ಎಂಬ ಸಂದೇಶ ವೈರಲ್ ಆಗಿ ಸುಮಾರು 5 ಸಾವಿರಕ್ಕೂ ಹೆಚ್ಚು ಮತದಾರರು ಮತದಾನ ಮಾಡಿ ಬಂದು ಈ ಕೊಡುಗೆ ಸ್ವೀಕರಿಸಿ ಖುಷಿ ಪಟ್ಟರು.

ಈ ಸುದ್ದಿ ಇಡೀ ರಾಜ್ಯದ ಗಮನ ಸೆಳೆದಿದೆ. ನಾನಾ ದೃಶ್ಯ ಮಾಧ್ಯಮಗಳು ವಿಶೇಷ ರೀತಿಯ ಮತದಾನ ಎಂಬ ಶೀರ್ಷಿಕೆಯಲ್ಲಿ ಬಿತ್ತರಿಸಿದ್ದಾರೆ. ಸೋಷಿಯಲ್ ಮಿಡಿಯಾದಲ್ಲಿ ಹವಾ ಸೃಷ್ಟಿಸಿದೆ.

ನಿಸ್ವಾರ್ಥ ಸಮಾಜ ಸೇವಕ ; ಇವತ್ತಿನ ಸಮಾಜದಲ್ಲಿ ಬಡ, ಮಧ್ಯಮ ವರ್ಗದವರ ದೊಡ್ಡ ಸಮಸ್ಯೆ ಎಂದರೆ ಆಹಾರ, ಆರೋಗ್ಯ, ಶಿಕ್ಷಣ. ದುಡಿದ ಹಣವನ್ನೆಲ್ಲಾ ಈ ಮೂರು ಅವಶ್ಯಕತೆಗಳ ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಜೀವನ ಪೂರ್ತಿ ಹಣಗಾಡುವಜಾತಿಗೆ. ಜನರ ಇಂತಹ ದುಸ್ಥಿತಿ ಅರಿತ ಡಾ. ಜಿ.ಎಸ್.ಶ್ರೀಧರ್ ಸಾಮಾನ್ಯ ಜನರ ಆರೋಗ್ಯ ರಕ್ಷಣೆಗೆ ಹೆಚ್ಚಿನ ಆಸಕ್ತಿ ವಹಿಸಿ, ತಮ್ಮ ಕುಮಾರ್ ಆಸ್ಪತ್ರೆಯಲ್ಲಿ ಅತ್ಯಂತ ಕಡಿಮೆ ದರದಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ. ಹಸಿದ ಜನರಿಗೆ ಸಾಂತ್ವನಗೊಳಿಸಲು ಅನ್ನಪೂರ್ಣ ನಿತ್ಯ ಅನ್ನ ದಾಸೋಹ ಆರಂಭಿಸಿ ನಿತ್ಯ ಐದು ನೂರಕ್ಕೂ ಹೆಚ್ಚಿಗೆ ಜನರಿಗೆ ಉಚಿತ ಊಟ ನೀಡುತ್ತಿದ್ದಾರೆ. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ದುಬಾರಿ ಶಿಕ್ಷಣ ಸುಲಭವಾಗಿ ದೊರೆಯುವಂತೆ, ಹಾಗೂ ಉದ್ಯೋಗಾವಕಾಶಕ್ಕಾಗಿ ತರಬೇತಿ ಶಿಕ್ಷಣ ಸಂಸ್ಥೆಯ ಸ್ಥಾಪನೆಯ ಗುರಿ ಹೊಂದಿದ್ದಾರೆ. ಇಂತಹ ನಿಸ್ವಾರ್ಥ ಸೇವೆಯ ಗುಣವಂತನ ಪಡೆದ ಕಲ್ಪತರು ನಾಡು ಸಂಪನ್ನವಾಗಿದೆ...

ಬೆಂಗಳೂರು ಗ್ರಾಮಾಂತರದಲ್ಲಿ ಯಾವುದೇ ರಣ ತಂತ್ರ ಮಾಡಿದರೂ ಮಂಜುನಾಥ್ ಗೆಲುವು ಶತಸಿದ್ಧ

ಮಂಡ್ಯ ಜಿಲ್ಲೆಯ ಜನತೆ ನಾನು ಮಾಡಿರುವ ಕೆಲಸ, ಜನರ ಮೇಲೆ ಇಟ್ಟಿರುವ ಪ್ರೀತಿ, ಮುಖ್ಯಮಂತ್ರಿಯಾಗಿದ್ದ ಸಂದರ್ಭ ಜಿಲ್ಲೆಗೆ ನೀಡಿದ ಕೊಡುಗೆ, ರೈತರ ನೆರವಿಗಾಗಿ ಮಾಡಿದ ಸಾಲ ಮನ್ನಾ ಸೇರಿದಂತೆ ಎಲ್ಲಾ ವಿಧಿಯಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲೆಯ ಜನತೆ ನನ್ನ ಪರವಾಗಿ ಮತ ಚಲಾಯಿಸುತ್ತಿದ್ದಾರೆ ಎಂಬಮಾಹಿತಿ ಲಭ್ಯವಾಗಿದೆ. ಕಾಂಗ್ರೆಸ್ ಕಾರ್ಯಕರ್ತರೂ ಕೂಡ ನನಗೆ ಮತ ನೀಡುತ್ತಿದ್ದಾರೆ. ಇದು ಸಂತಸ ತಂದಿದೆ ಎಂದು ಹ್ಞೇಳಿ ವ್ಯಕ್ತಪಡಿಸಿದರು. ಹಾಸನ ಲೋಕಸಭಾ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರಿಗೆ ಸಾಕಸ್ಟು ಜನ ವಿರೋಧಿಗಳಿದ್ದು, ಪೆನ್ಡ್ರೈವ್ ಎಂಬ ವದಂತಿಯನ್ನು ಹರಡುತ್ತಿದ್ದಾರೆ. ಆದರೆ ಈ ಚುನಾವಣೆಯಲ್ಲಿ ವಿರೋಧಿಗಳ ಇಂತಹ ಯಾವುದೇ ಕುತಂತ್ರಗಳೂ ನಡೆಯುವುದಿಲ್ಲ. ಎಲ್ಲಿಯೂ ಕೂಡ ಮತದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಹೇಳಿದರು.

ಸುಮಲತಾ ಅವರ ಮನೆಗೆ ನಾನೇ ಖುದ್ದಾಗಿ ತೆರಳಿ ಅವರ ವಿಶ್ವಾಸ ಗಳಿಸುವ ಪ್ರಯತ್ನ ಮಾಡಿದ್ದೇನೆ. ಆದರೂ ಅವರು ಏಕೆ ಈ ರೀತಿಯ ಸುಳ್ಳು ಹೇಳುತ್ತಿದ್ದಾರೋ ಗೊತ್ತಿಲ್ಲ. ಈಗಾಗಲೇ ಚುನಾವಣೆ ಮುಗಿದಿದೆ. ಸುಮಲತಾ ಅವರ ನಡೆಯ ಬಗ್ಗೆ ಮಾತನಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಅದು ಮುಗಿದ ಅಧ್ಯಾಯ ಎಂದು ಹೇಳಿದರು.

ಇದೇ ವೇಳೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಮನ್ಮುಲ್ ನಿರ್ದೇಶಕ ಎಸ್.ಪಿಸ್ವಾಮಿ, ಮಂಡ್ಯ ಜಿಲ್ಲಾ ಜೆಡಿಎಸ್ ಘಟಕದ ಅಧ್ಯಕ್ಷ ಡಿ. ರಮೇಶ್, ಮುಖಂಡ ಸಂತೋ?ತಮ್ಮಣ್ಣ , ಮದ್ದೂರು ತಾಲ್ಲೂಕು ಘಟಕದ ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮಾದನಾಯಕನಹಳ್ಳಿ ರಾಜಣ್ಣ, ಸೇರಿದಂತೆ ಮತ್ತಿತರರಿದ್ದರು.

ಮತದಾನ ಮಾಡುವುದು ನನ್ನ ಕರ್ತವ್ಯ

ಎನ್ಡಿಎ, ಬಿಜೆಪಿ ಗೆಲ್ಲಬೇಕು ಎಂಬುದು ಇದೆ. ಮಂಡ್ಯದಲ್ಲೂ ಒಳ್ಳೆಯ ಟ್ರೆಂಡ್ ಇದೆ ಎಂದು ಮಾತನಾಡುತ್ತಾರೆ. ರಾಜ್ಯದ 28 ಕ್ಷೇತ್ರಗಳಲ್ಲೂ ಎನ್ಡಿಎ ಅಭ್ಯರ್ಥಿಗಳು ಗೆಲ್ಲಬೇಕು ಎಂಬುದು ನನ್ನ ಆಶಯ ಎಂದರು. ಸಚಿವ ಎನ್.ಚಲುವರಾಯಸ್ವಾಮಿ ಅವರ ಋಣ ಸಂದಾಯದ ಹೇಳಿಕೆಗೆ ಪ್ರತಿಕ್ರಿಯಿಸಿ, ಚುನಾವಣೆ ಬಂದಾಗ ಅವರು ಋಣ ಸಂದಾಯ ಬಗ್ಗೆ ಮಾತನಾಡುತ್ತಾರೆ. ಆ ಬಗ್ಗೆ ಅವರನ್ನೇ ಕೇಳಿ ಎಂದು ಹೇಳಿದರು. ಇದೇ ವೇಳೆ ಮುಖಂಡ ಮದನ್, ಅಂಬರೀಶ್ ಅಭಿಮಾನಿ ಬಳಗದ ಹನಕೆರೆ ಶಶಿಕುಮಾರ್, ಬೇಲೂರು ಸೋಮಶೇಖರ್, ದೊಡ್ಡಆರಸಿನಕೆರೆಯ ಶಿವಕುಮಾರ್, ಕೇಬಲ್ ಮಧು, ರಮೇಶ್, ಮಹೇಂದ್ರ, ಗಿರೀಶ್, ಪುಟ್ಟರಾಜು, ಹೊಂದಲಗೆರೆ ಶಿವು, ಕರಡಕೆರೆ ಪುಟ್ಟಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕನ್ನಮಂಗಲ ಬೂತ್‌ನಲ್ಲಿ ಬಿರುಸಿನ ಮತದಾನ



ದೇವನಹಳ್ಳಿ: ತಾಲೂಕಿನ ಕನ್ನಮಂಗಲ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಹೊಂದಿರುವಂತಹ ಏಕೈಕ ಬೂತ್ ನಲ್ಲಿ ಬಿರುಸಿನ ಮತದಾನ ಮಾಡಿ ತಮ್ಮ ಹಕ್ಕನ್ನು ಚಲಾಯಿಸಿದರು.

ಇದೇ ಸಂದರ್ಭದಲ್ಲಿ ಕನ್ನಮಂಗಲ ಗ್ರಾಮದ ಮುಖಂಡರಾದ ಕೆ ಸಿ ಮಂಜುನಾಥ್ ಕೆ ಆರ್ ನಾಗೇಶ್ ಲಕ್ಷ್ಮಿಕಾಂತ್ ಸೇರಿದಂತೆ ಹಲವಾರು ಮುಖಂಡರು ಗ್ರಾಮಸ್ಥರು ಇದ್ದರು.

ಬಿರು ಬಿಸಿಲಿನಲ್ಲೂ ಮತದಾನ ಮಾಡಿ ಸಂಭ್ರಮಿಸಿದ ಮತದಾರರು



ದೇವನಹಳ್ಳಿ: ತಾಲೂಕಿನ ಕುದಾಣ ಹೋಬಳಿಯ ದ್ಯಾವರಹಳ್ಳಿ ಗ್ರಾಮದಲ್ಲಿನ ಮತದಾರರು ಮತದಾನ ಮಾಡಿ ಸಂಭ್ರಮಿಸಿ ಇತರರು ಮತದಾನ ಮಾಡುವಂತೆ ಪ್ರೇರಣೆ ನೀಡಿದರು.

ಇದೇ ಸಂದರ್ಭದಲ್ಲಿ ದ್ಯಾವರಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾರಾಯಣಸ್ವಾಮಿ ,ಮುಖಂಡ ವೆಂಕಟಪ್ಪ ,ಚಿಂದ್ರಪ್ಪ ಸೇರಿದಂತೆ ಕಾರ್ಯಕರ್ತರು ಗ್ರಾಮಸ್ಥರು ಮತದಾರರು ಇದ್ದರು.

ಮತದಾನ